# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 77 (741) |
| ಸದಸ್ಯರ ಹೆಸರು | : | ಶ್ರೀ ಡಿ.ಎಸ್ ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 10.03.2026 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಕಛೇರಿಗಳ ನಿರ್ಮಾಣಕ್ಕಾಗಿ ಸುಮಾರು 40 ಕೋಟಿ ರೂ. ಮೌಲ್ಯದ ಸರ್ಕಾರಿ ಜಾಗವನ್ನು ಕೇವಲ 2 ಕೋಟಿ ರೂ.ಗಳ ರಿಯಾಯಿತಿ ದರದಲ್ಲಿ ಮಂಜೂರು ಮಾಡಿರುವುದು ನಿಜವೆ; | ಸಚಿವ ಸಂಪುಟದ ನಿರ್ಣಯದಂತೆ ನಾಗರಿಕ ಸೌಲಭ್ಯ ನಿವೇಶನಗಳನ್ನು ಕಾಂಗ್ರೆಸ್ ಪಕ್ಷದ ಕಛೇರಿಗಳ ನಿರ್ಮಾಣಕ್ಕಾಗಿ ಮಂಜೂರು ಮಾಡಲಾಗಿರುವ ವಿವರಗಳನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ. |
| ಆ) | ತುಮಕೂರು, ಚಾಮರಾಜನಗರ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮಾರುಕಟ್ಟೆ ದರಕ್ಕಿಂತ ಕಡಿಮೆ ಬೆಲೆಗೆ ಜಾಗ ನೀಡಿರುವುದರಿಂದ ಸರ್ಕಾರಕ್ಕೆ ಆಗಿರುವ ನಷ್ಟವೆಷ್ಟು; | ತುಮಕೂರು ಮಹಾನಗರ ಪಾಲಿಕೆ ಒಡೆತನದಲ್ಲಿರುವ ತುಮಕೂರು ತಾಲ್ಲೂಕು, ಕಸಬಾ ಹೋಬಳಿ, ಮರುಳೂರು ಗ್ರಾಮ ಸ.ನಂ. 87/2 ರಲ್ಲಿನ 02ಎಕರೆ ಜಾಗಕ್ಕೆ ಉಪನೋಂದಣಾಧಿಕಾರಿಗಳ 2023-24 ನೇ ಸಾಲಿನ ಮಾರ್ಗಸೂಚಿ ಮೌಲ್ಯ ಎಕರೆ 01.00 ಕ್ಕೆ ರೂ.1,70,00,000/- ಗಳನ್ನು ನಿಗದಿಪಡಿಸಲಾಗಿರುತ್ತದೆ.<br><br>ಸಚಿವ ಸಂಪುಟ ಪ್ರಕರಣ ಸಂಖ್ಯೆ: ಸಿ 396/2025, ದಿನಾಂಕ:22.05.2025 ರ ನಿರ್ಣಯದಂತೆ ಪ್ರಸ್ತುತ ಮಾರ್ಗಸೂಚಿ ಮೌಲ್ಯದ ಶೇ.05 ರಷ್ಟು ದರ ವಿಧಿಸಿ ಮಂಜೂರು ಮಾಡಲಾಗಿದೆ **(ಅನುಬಂಧ-2).**<br><br>ಚಾಮರಾಜನಗರ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ವ್ಯಾಪ್ತಿಯಲ್ಲಿ ಯಾವುದೇ ನಾಗರಿಕ ಸೌಲಭ್ಯ ನಿವೇಶನವನ್ನು ಹಂಚಿಕೆ ಮಾಡಿರುವುದಿಲ್ಲ. |

| | | |
|---|---|---|
| **ಇ)** | ನಿಯಮಗಳ ಪ್ರಕಾರ ಕಂದಾಯ ಇಲಾಖೆಯ ತಕರಾರಿದ್ದರೂ ಸಹ ನಿವೇಶನಗಳನ್ನು ಮಂಜೂರು ಮಾಡಲಾಗಿರುವುದರ ಉದ್ದೇಶವನ್ನು ತಿಳಿಸುವುದು; | ಕಂದಾಯ ಇಲಾಖೆಯಿಂದ ಯಾವುದೇ ತಕರಾರುಗಳು ಸ್ವೀಕೃತವಾಗಿರುವುದಿಲ್ಲ. |
| **ಈ)** | ಈ ಮಂಜೂರಾತಿ ಪ್ರಕ್ರಿಯೆಯಲ್ಲಿ ಕಾನೂನು ಉಲ್ಲಂಘನೆಯಾಗಿರುವ ಬಗ್ಗೆ ಕೇಳಿಬಂದಿರುವ ದೂರಿನನ್ವಯ ಮಂಜೂರಾತಿಯನ್ನು ರದ್ದುಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಮಂಜೂರಾತಿ ಪ್ರಕ್ರಿಯೆಯಲ್ಲಿ ಕಾನೂನು ಉಲ್ಲಂಘನೆಯಾಗಿರುವ ಬಗ್ಗೆ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ. |

**ಸಂಖ್ಯೆ: ನಅಇ 68 ಬೆಂರೂಪ್ರಾ 2026 (ಇ-ಕಡತ)**

**(ಬಿ.ಎಸ್. ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬಾಗಲಕೋಟೆ ಜಿಲ್ಲೆಯ ಲೋಕಾಪೂರ ಪಟ್ಟಣ ಪಂಚಾಯತಿಯ ಸಾರ್ವಜನಿಕ ಉದ್ದೇಶಕ್ಕಾಗಿ/ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಆಸ್ತಿ ನಂ.3741, ವಿಸ್ತೀರ್ಣ 400.63 ಚ.ಮೀ ನಿವೇಶನವನ್ನು ಕಾಂಗ್ರೆಸ್ ಭವನ ಟ್ರಸ್ಟ್, ಬಾಗಲಕೋಟೆ ಇವರಿಗೆ ಮಂಜೂರು ಮಾಡುವ ಕುರಿತು.

ಪೌರಾಡಳಿತ ನಿರ್ದೇಶನಾಲಯ

**ಓದಲಾಗಿದೆ:**

1. ಮುಖ್ಯಾಧಿಕಾರಿ, ಲೋಕಾಪುರ ಪಟ್ಟಣ ಪಂಚಾಯಿತಿ ಇವರ ಪತ್ರ ಸಂಖ್ಯೆ:ಪ.ಪಂ.ಲೋ/ಕಂ.ವಿ.ಲೇ/2024-25 ದಿನಾಂಕ:03.04.2025.
2. ಜಿಲ್ಲಾಧಿಕಾರಿ, ಬಾಗಲಕೋಟೆ ಜಿಲ್ಲೆ ಇವರ ಪತ್ರ ಸಂಖ್ಯೆ:ಜಿನಕೋಬಾ/3/ನಿವೇಶನ/ನಸಜು/ಸಿಆರದ/42/2024-25/22, ದಿನಾಂಕ:03.04.2025.
3. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರ ಪತ್ರ ಸಂಖ್ಯೆ: 1722576/DMA/DEV/OTH/29/2025, ದಿನಾಂಕ:13.05.2025.

*****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಮುಖ್ಯಾಧಿಕಾರಿ, ಲೋಕಾಪೂರ ಪಟ್ಟಣ ಪಂಚಾಯಿತಿ ಇವರು ಬಾಗಲಕೋಟೆ ಜಿಲ್ಲೆಯ ಲೋಕಾಪೂರ ಪಟ್ಟಣ ಪಂಚಾಯಿತಿ ಒಡೆತನದ ಹಾಗೂ ಸಾರ್ವಜನಿಕ ಉದ್ದೇಶಕ್ಕಾಗಿ/ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಆಸ್ತಿ ನಂ.3741, ವಿಸ್ತೀರ್ಣ-400.63 ಚ.ಮೀ. ನಿವೇಶನವನ್ನು ಅಧ್ಯಕ್ಷರು, ಬ್ಲಾಕ್ ಕಾಂಗ್ರೆಸ್ ಕಮಿಟಿ, ಲೋಕಾಪೂರ ಇವರಿಗೆ ಲೀಜ್ ಆಧಾರದ ಮೇಲೆ 30 ವರ್ಷಗ ಅವಧಿಗೆ ನೀಡುವ ಕುರಿತು ದಿನಾಂಕ:16-10-2024ರಂದು ನಡೆದ ಸಾಮಾನ್ಯ ಸಭೆಯ ಠರಾವು ಸಂಖ್ಯೆ:157ರಲ್ಲಿ ಸದರಿ ಜಾಗೆಯನ್ನು ಕರ್ನಾಟಕ ರಾಜ್ಯದ ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಸಮಿತಿಯ "ಕಾಂಗ್ರೆಸ್ ಭವನ ಟ್ರಸ್ಟ" ರಡಿ ಲೋಕಾಪೂರ ಬ್ಲಾಕ್ ಕಾಂಗ್ರೆಸ್ ಸಮಿತಿಯ ಕಾರ್ಯಾಲಯಕ್ಕೆ ನೀಡುವ ಬಗ್ಗೆ ನಿರ್ಣಯ ಕೈಗೊಂಡು, ಅದರಂತೆ ಮಾಹಿತಿಯನ್ನು ದಿನಾಂಕ:18.10.2024ರಂದು ಸ್ಥಳೀಯ ದಿನಪತ್ರಿಕೆಯಲ್ಲಿ ಪ್ರಕಟಿಸಿ, ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗದ ಕಾರಣ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ಇವರಿಗೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ಇವರು ನಗರ ಸ್ಥಳೀಯ ಸಂಸ್ಥೆಯ ಮಾಲೀಕತ್ವದ ನಾಗರೀಕ ಸೌಲಭ್ಯದ ನಿವೇಶನಗಳನ್ನು ಹಂಚಿಕೆ ಮಾಡಲು The Karnataka Planning Authorities (Allotment of Civic Amenity sites) Rules, 2016 ಅನುಸರಿಸಲು ಸರ್ಕಾರದ ಸುತ್ತೋಲೆ ದಿನಾಂಕ:30-01-2018ರಲ್ಲಿನ ಸೂಚನೆಗಳನ್ವಯ ಮರುಪರಿಶೀಲಿಸಿ ಸಲ್ಲಿಸುವಂತೆ ತಿಳಿಸಿರುವುದರನ್ವಯ ಮುಖ್ಯಾಧಿಕಾರಿ, ಲೋಕಾಪೂರ ಪಟ್ಟಣ ಪಂಚಾಯಿತಿ ಇವರು ಪ್ರಸ್ತಾವನೆಯನ್ನು ಮತ್ತೊಮ್ಮೆ ದಿನಾಂಕ:25.03.2025ರಂದು ನಡೆದ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ, ಸರ್ಕಾರದ ಅಧಿಸೂಚನೆ ದಿನಾಂಕ:24.05.2017ರ ಪ್ರಕಾರ ಲೋಕಾಪೂರ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಒಟ್ಟು 09 ನಾಗರೀಕ ಸೌಲಭ್ಯ ನಿವೇಶನಗಳು ಲಭ್ಯವಿದ್ದು, ಅದರ ಪೈಕಿ ಶೇ.90 ರಷ್ಟು ಅಂದರೆ 8 ನಿವೇಶನಗಳನ್ನು ಸರ್ಕಾರಿ ಉಪಯೋಗಕ್ಕೆ ಮೀಸಲಿಟ್ಟು, ಬಾಕಿ ಉಳಿಯುವ ಶೇ.10 ರಷ್ಟು ಅಂದರೆ 01 ನಿವೇಶನದಲ್ಲಿ ಪರಿಶಿಷ್ಟ ಜಾತಿಗೆ ಶೇ. 18ರಷ್ಟು, ಪರಿಶಿಷ್ಟ ಪಂಗಡಕ್ಕೆ ಶೇ.3 ರಷ್ಟು ಮತ್ತು ವಿಶೇಷಚೇತನರಿಗೆ ಶೇ.2ರಷ್ಟು ಮೀಸಲಿರಿಸಬೇಕಾಗಿದ್ದು, ನಿವೇಶನಗಳ ಲಭ್ಯತೆ ಇಲ್ಲದಿರುವುದರಿಂದ ಬಾಕಿ ಉಳಿದಿರುವ 01 ನಿವೇಶನವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ಪ್ರಸ್ತಾಪಿತ ನಿವೇಶನವನ್ನು ಅಧ್ಯಕ್ಷರು, ಬ್ಲಾಕ್ ಕಾಂಗ್ರೆಸ್ ಕಮಿಟಿ, ಲೋಕಾಪೂರ ಇವರಿಗೆ

ಲೀಜ್ ಆಧಾರದ ಮೇಲೆ 30 ವರ್ಷಗಳವರೆಗೆ ಮಂಜೂರು ಮಾಡಲು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಪತ್ರದಲ್ಲಿ, ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಇವರು ಬಾಗಲಕೋಟೆ ಜಿಲ್ಲೆಯ ಲೋಕಾಪೂರ ಪಟ್ಟಣ ಪಂಚಾಯಿತಿ ಒಡೆತನದ ಹಾಗೂ ಸಾರ್ವಜನಿಕ ಉದ್ದೇಶಕ್ಕಾಗಿ/ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಆಸ್ತಿ ನಂ.3741, ವಿಸ್ತೀರ್ಣ-400.63 ಚ.ಮೀ. ನಿವೇಶನವನ್ನು ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಲೀಸ್ ಆಧಾರದ ಮೇಲೆ 30 ವರ್ಷಗಳ ಅವಧಿಗೆ ಮಂಜೂರು ಮಾಡುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಪಟ್ಟಣ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಠರಾವು ಕೈಗೊಂಡಿರುವುದನ್ನು ಮತ್ತು ಮುಖ್ಯಾಧಿಕಾರಿಗಳು, ಲೋಕಾಪೂರ ಪಟ್ಟಣ ಪಂಚಾಯತಿ ಇವರು ತಾಲ್ಲೂಕು ಆರೋಗ್ಯ ಅಧಿಕಾರಿಗಳು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಸಮಾಜ ಕಲ್ಯಾಣ ಇಲಾಖೆ ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಇವರಿಂದ ಮುಂದಿನ ದಿನಗಳಲ್ಲಿ ಸದರಿ ಆಸ್ತಿಯಲ್ಲಿ ಯಾವುದೇ ರೀತಿಯ ಕಟ್ಟಡವನ್ನು ನಿರ್ಮಾಣ ಮಾಡುವ ಸಂಧರ್ಭದಲ್ಲಿ ನಿರಾಕ್ಷೇಪಣಾ ಪತ್ರ (ಎನ್.ಓ.ಸಿ.) ಪಡೆದುಕೊಳ್ಳುವ ಷರತ್ತಿಗೊಳಪಟ್ಟು ಹಾಗೂ ಸದರಿ ನಿವೇಶನವು ಲೋಕಾಪೂರ ಪಟ್ಟಣ ಪಂಚಾಯತಿ ರವರಿಗೆ ಅವಶ್ಯವಿರುವುದಿಲ್ಲವೆಂದು ಮತ್ತು ನಗರ ಸ್ಥಳೀಯ ಸಂಸ್ಥೆಯ ಮಾಲೀಕತ್ವದ ನಾಗರೀಕ ಸೌಲಭ್ಯದ ನಿವೇಶನಗಳನ್ನು ಹಂಚಿಕೆ ಮಾಡಲು The Karnataka Planning Authorities (Allotment of Civic Amenity sites) Rules, 2016ರ ನಿಯಮ(2)ರಲ್ಲಿನ ತಿಳಿಸಿರುವ ಉದ್ದೇಶಗಳಿಗೆ ಹೊರತುಪಡಿಸಿ, ಇತರೆ ಉದ್ದೇಶಗಳಿಗೆ ನೀಡಲು ಅವಕಾಶವಿರುವುದಿಲ್ಲವೆಂದು ಮತ್ತು ಸರ್ಕಾರದ ಆದೇಶ ಸಂಖ್ಯೆ: ನಅಇ 129 ಟಿಎಂಡಿ 2002, ದಿನಾಂಕ:02.06.2003ರ ಕ್ರಮ ಸಂ:VIರಲ್ಲಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಸ್ವತ್ತುಗಳನ್ನು ಸಾರ್ವಜನಿಕ ಬಹಿರಂಗ ಹರಾಜು ಮೂಲಕವೇ ನೀಡಲು ಮಾತ್ರ ಅವಕಾಶವಿರುವುದರಿಂದ ವಿಶೇಷ ಪ್ರಕರಣವೆಂದು ಪರಿಗಣಿಸಿ, ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸಿರುತ್ತಾರೆ.

ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಬಾಗಲಕೋಟೆ ಜಿಲ್ಲೆಯ ಲೋಕಾಪುರ ಪಟ್ಟಣ ಪಂಚಾಯತಿ ಒಡೆತನದ ಹಾಗೂ ಸಾರ್ವಜನಿಕ ಉದ್ದೇಶಕ್ಕಾಗಿ / ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಆಸ್ತಿ ನಂ.3741, ವಿಸ್ತೀರ್ಣ-400.63 ಚ.ಮೀ ನಿವೇಶನವನ್ನು ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ 27 ಟಿಟಿಪಿ 2016, ದಿನಾಂಕ: 24.05.2017 ರಲ್ಲಿ The Karnataka Planning Authorities (Allotment of Civic Amenity Sites) Rules, 2016 ರ ನಿಯಮ (2)ರಲ್ಲಿ ತಿಳಿಸಲಾದ ಉದ್ದೇಶಗಳಿಗೆ ಹೊರತುಪಡಿಸಿ, ಬೇರೆ ಉದ್ದೇಶಗಳಿಗೆ ಅಂದರೆ ರಾಜಕೀಯ ಪಕ್ಷದ ಭವನ ಕಟ್ಟಡ ನಿರ್ಮಿಸುವ ಸಲುವಾಗಿ ಹಂಚಿಕೆ ಮಾಡಲು ಅವಕಾಶವಿರುವುದಿಲ್ಲ.

ಮುಂದುವರೆದು, ಸರ್ಕಾರದ ಸರ್ಕಾರದ ಆದೇಶ ಸಂಖ್ಯೆ: ನಅಇ 129 ಟಿಎಂಡಿ 2002, ದಿನಾಂಕ:02.06.2003ರ ಕ್ರಮ ಸಂ:VIರಲ್ಲಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಸ್ವತ್ತುಗಳನ್ನು ಸಾರ್ವಜನಿಕ ಬಹಿರಂಗ ಹರಾಜು ಮೂಲಕ ನೀಡಲು ಮಾತ್ರ ಅವಕಾಶವಿರುವುದರಿಂದ ನಾಗರೀಕ ಸೌಲಭ್ಯ ನಿವೇಶನವನ್ನು ಹಂಚಿಕೆ ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಆದರೆ, ದಿನಾಂಕ:25.09.2025ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಪ್ರಸ್ತಾಪಿತ ನಿವೇಶನದ ಮಾರುಕಟ್ಟೆ ಮೌಲ್ಯದ ಶೇ 5 ರಷ್ಟನ್ನು ವಿಧಿಸಿ, ಖಾಯಂ ಆಗಿ ಮಂಜೂರು ಮಾಡಲು ಸಚಿವ ಸಂಪುಟವು ಅನುಮೋದನೆ ನೀಡಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ನಅಇ 8 ಟಿಎಂಡಿ 2025,**
**ಬೆಂಗಳೂರು, ದಿನಾಂಕ:14.10.2025**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬಾಗಲಕೋಟೆ ಜಿಲ್ಲೆಯ ಲೋಕಾಪುರ ಪಟ್ಟಣ ಪಂಚಾಯಿತಿ ಒಡೆತನದ ಹಾಗೂ ಸಾರ್ವಜನಿಕ ಉದ್ದೇಶಕ್ಕಾಗಿ/ನಾಗರೀಕ

ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಆಸ್ತಿ ನಂ.3741, ವಿಸ್ತೀರ್ಣ-400.63 ಚ.ಮೀ ನಿವೇಶನವನ್ನು ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಮಾರುಕಟ್ಟೆ ಮೌಲ್ಯದ ಶೇಕಡಾ 5ರಷ್ಟನ್ನು ವಿಧಿಸಿ, ಖಾಯಂ ಆಗಿ ಕಟ್ಟಡ ನಿರ್ಮಾಣದ ಉದ್ದೇಶಕ್ಕಾಗಿ ಕೆಳಕಂಡ ಷರತ್ತಿಗೊಳಪಟ್ಟು ಮಂಜೂರು ಮಾಡಿ ಆದೇಶಿಸಿದೆ.

**ಷರತ್ತುಗಳು:**

1. ಸದರಿ ನಾಗರೀಕ ಸೌಲಭ್ಯ ನಿವೇಶನವನ್ನು ಲೋಕಾಪುರ ಪಟ್ಟಣದಲ್ಲಿ ಕಾಂಗ್ರೆಸ್ ಕಛೇರಿ ಕಟ್ಟಡದ ನಿರ್ಮಾಣದ ಉದ್ದೇಶಕ್ಕೆ ಹಂಚಿಕೆ ಮಾಡಿದ್ದು, ಅದನ್ನು ಹೊರತುಪಡಿಸಿ, ಬೇರೆ ಯಾವುದೇ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.
2. ಸದರಿ ನಾಗರೀಕ ಸೌಲಭ್ಯ ನಿವೇಶನವನ್ನು ಯಾವುದೇ ಸಂದರ್ಭದಲ್ಲಿ ಬೇರೆ ಯಾರಿಗೂ ಮಾರಾಟ ಮಾಡುವಂತಿಲ್ಲ ಅಥವಾ ಗುತ್ತಿಗೆಗೆ ನೀಡುವಂತಿಲ್ಲ.
3. ಸದರಿ ನಾಗರೀಕ ಸೌಲಭ್ಯ ನಿವೇಶನವನ್ನು ಪಡೆದ ಸಂಸ್ಥೆಯು ಮೇಲಿನ ಷರತ್ತುಗಳನ್ನು ಪಾಲಿಸಲು ವಿಫಲವಾದಲ್ಲಿ ಯಾವುದೇ ಪರಿಹಾರ ನೀಡದೇ ಸದರಿ ಜಾಗದಲ್ಲಿರುವ ಕಟ್ಟಡಗಳ ಸಹಿತ ವಶಕ್ಕೆ ಪಡೆಯಲು ಲೋಕಾಪುರ ಪಟ್ಟಣ ಪಂಚಾಯಿತಿಯು ಸಂಪೂರ್ಣ ಹಕ್ಕು ಹೊಂದಿರುತ್ತದೆ.
4. ಲೋಕಾಪುರ ಪಟ್ಟಣ ಪಂಚಾಯಿತಿ ವತಿಯಿಂದ ಕಛೇರಿ ಕಟ್ಟಡದ ನಿರ್ಮಿಸಲು ಯಾವುದೇ ಅನುದಾನ ನೀಡತಕ್ಕದ್ದಲ್ಲ.

ಈ ಆದೇಶವನ್ನು ಸಚಿವ ಸಂಪುಟವು ಪ್ರಕರಣ ಸಂಖ್ಯೆ:ಸಿ.754/2025, ದಿನಾಂಕ: 25.09.2025 ರಂದು ನೀಡಿರುವ ಅನುಮೋದನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ

14/10/2025

(ಮಹಾಂತಪ್ಪ ಎಸ್. ತುರಕನೂರ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ
(ಪೌರಾಡಳಿತ-2 ಮತ್ತು ಮಂಡಳಿ)

**ಹೊರಡಿಸಿದೆ**
**ದಿನಾಂಕ:** 15/10/25

**ಇವರಿಗೆ:**

1. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ವಿ.ವಿ. ಗೋಪುರ, ಬೆಂಗಳೂರು.
2. ಜಿಲ್ಲಾಧಿಕಾರಿ, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ.
3. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಾಗಲಕೋಟೆ ಜಿಲ್ಲೆ.
4. ಮುಖ್ಯಾಧಿಕಾರಿ, ಲೋಕಾಪೂರ ಪಟ್ಟಣ ಪಂಚಾಯಿತಿ, ಬಾಗಲಕೋಟೆ ಜಿಲ್ಲೆ.
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:**

1. ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನಸೌಧ, ಬೆಂಗಳೂರು- (ವಿಷಯ ಸಂಖ್ಯೆ:ಸಿ/754/2025).
3. ಸರ್ಕಾರದ ಅಪರ ಕಾರ್ಯದರ್ಶಿ-4, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
4. ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.

15/10/25

15/10/25

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಧಾರವಾಡ ಜಿಲ್ಲೆಯ ಅಣ್ಣಿಗೇರಿ ಪುರಸಭೆ, ನವಲಗುಂದ ಪುರಸಭೆ, ಕಲಬುರಗಿ ಜಿಲ್ಲೆಯ ಅಫಜಲಪೂರ ಪುರಸಭೆ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಯ ಮಾಗಡಿ ಪುರಸಭೆಯ ವ್ಯಾಪ್ತಿಯಲ್ಲಿ ಲಭ್ಯವಿರುವ ಸಾರ್ವಜನಿಕ ಉದ್ದೇಶಕ್ಕಾಗಿ / ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ನಿವೇಶನಗಳನ್ನು ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಮಂಜೂರು ಮಾಡುವ ಕುರಿತು.

**ಓದಲಾಗಿದೆ:**
1. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರ ಪತ್ರ ಸಂಖ್ಯೆ: 1807222/DMA/DEV/OTH/80/2025, ದಿನಾಂಕ:15.07.2025.
2. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರ ಪತ್ರ ಸಂಖ್ಯೆ: 1827502/DMA/DEV/OTH/118/2025, ದಿನಾಂಕ:14.08.2025.
3. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರ ಪತ್ರ ಸಂಖ್ಯೆ: 1834593/DMA/DEV/OTH/95/2025, ದಿನಾಂಕ:08.08.2025.
4. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರ ಏಕ ಕಡತ ಸಂಖ್ಯೆ: 1829952/DMA/DEV/OTH/90/2025.

ಪೌರಾಡಳಿತ ನಿರ್ದೇಶನಾಲಯ 15 OCT 2025 ಸಂ. ಬೆಂಗಳೂರು

*****

**ಪ್ರಸ್ತಾವನೆ:**

1) ಮಾನ್ಯ ಶಾಸಕರು, ನವಲಗುಂದ ವಿಧಾನಸಭಾ ಕ್ಷೇತ್ರ ಇವರು ಧಾರವಾಡ ಜಿಲ್ಲೆ, ಅಣ್ಣಿಗೇರಿ ಪುರಸಭೆ ಮಾಲೀಕತ್ವದಲ್ಲಿರುವ ಒಟ್ಟು 18 ನಾಗರಿಕ ಸೌಲಭ್ಯದ ನಿವೇಶನಗಳ ಪೈಕಿ ಸ್ವತ್ತಿನ ಸಂಖ್ಯೆ:23-505-322ಬಿ, ಪ್ಲಾಟ್ ನಂ.2 ವಿಸ್ತೀರ್ಣ (1668.800 ಚ.ಮೀ.) ಜಾಗದ ನಿವೇಶನವನ್ನು 30 ವರ್ಷದ ಅವಧಿಗೆ ರಿಯಾಯಿತಿ ದರದಲ್ಲಿ ಲೀಸ್ ಆಧಾರದ ಮೇಲೆ ಮಂಜೂರು ಮಾಡಲು ಕೋರಿರುವ ಬಗ್ಗೆ, ಆಡಳಿತಾಧಿಕಾರಿಗಳು, ಅಣ್ಣಿಗೇರಿ ಪುರಸಭೆ ಹಾಗೂ ಉಪವಿಭಾಗಾಧಿಕಾರಿಗಳು, ಧಾರವಾಡ ರವರ ಅಧ್ಯಕ್ಷತೆಯಲ್ಲಿ ದಿನಾಂಕ:28-04-2025 ರಂದು ಜರುಗಿದ ವಿಶೇಷ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:13 ರಲ್ಲಿ ಚರ್ಚಿಸಿ, ಸದರಿ ಸಂಘ ಸಂಸ್ಥೆಗೆ ನಿವೇಶನ ನೀಡಲು ಮುಂದಿನ ಸೂಕ್ತ ಕ್ರಮ ಕೈಗೊಳ್ಳುವಂತೆ ಮುಖ್ಯಾಧಿಕಾರಿಗಳಿಗೆ ಅಧಿಕಾರ ನೀಡಿ, ಸರ್ವಾನುಮತದಿಂದ ಠರಾವು ನಂ:206ರಲ್ಲಿ ನಿರ್ಣಯ ಕೈಗೊಳ್ಳಲಾಗಿರುತ್ತದೆ. ಅದರಂತೆ, ಮುಖ್ಯಾಧಿಕಾರಿ, ಅಣ್ಣಿಗೇರಿ ಪುರಸಭೆ ಇವರು ದಿನಾಂಕ:16-05-2025ರ ಪ್ರಮಾಣ ಪತ್ರದಲ್ಲಿ ಸದರಿ ನಿವೇಶನವನ್ನು ಬೇರೆ ಯಾವುದೇ ರೀತಿಯ ನಾಗರಿಕ ಸೌಲಭ್ಯಗಳಿಗೆ ಅಗತ್ಯವಿರುವುದಿಲ್ಲವೆಂದು ದೃಢೀಕರಿಸಿ, ಪ್ರಸ್ತಾವನೆಯನ್ನು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರಿಗೆ ಸಲ್ಲಿಸಿರುತ್ತಾರೆ.

ಅದರನ್ವಯ ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರು ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 1 ಟಿಎಂಡಿ 2018, ದಿನಾಂಕ: 30.01.2018 ಮತ್ತು The Karnataka Planning Authorities (Allotment of Civic Amenity sites) Rules, 2016ರ ನಿಯಮ (2) ರಲ್ಲಿ ತಿಳಿಸಲಾದ ಉದ್ದೇಶಗಳಿಗೆ ಹೊರತುಪಡಿಸಿ ಬೇರೆ ಉದ್ದೇಶಗಳಿಗೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ನಾಗರಿಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ನಿವೇಶನಗಳನ್ನು ಮಂಜೂರು ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲವೆಂದು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

2) ಮಾನ್ಯ ಶಾಸಕರು, ನವಲಗುಂದ ವಿಧಾನಸಭಾ ಕ್ಷೇತ್ರ ಇವರು ಧಾರವಾಡ ಜಿಲ್ಲೆ ನವಲಗುಂದ ಪುರಸಭೆ ವ್ಯಾಪ್ತಿಯಲ್ಲಿನ ರಿ.ಸ.ನಂ: 414/1 ರಲ್ಲಿ ನಾಗರಿಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ನಿವೇಶನ ಸಂಖ್ಯೆ:99 (ವಿಸ್ತೀರ್ಣ 1287.77 ಚ.ಮೀ.) ಜಾಗವನ್ನು ಬ್ಲಾಕ್ ಕಾಂಗ್ರೆಸ್ ಭವನ ಕಟ್ಟಡ ನಿರ್ಮಾಣಕ್ಕಾಗಿ ಲೀಸ್/ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲು ಕೋರಿರುವ ಬಗ್ಗೆ, ಅಧ್ಯಕ್ಷರು, ನವಲಗುಂದ

ಪುರಸಭೆ ರವರ ಅಧ್ಯಕ್ಷತೆಯಲ್ಲಿ ದಿನಾಂಕ:22-07-2025 ರಂದು ಜರುಗಿದ ವಿಶೇಷ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:29ರಲ್ಲಿ ಪ್ರಸ್ತಾಪಿತ ಜಾಗವನ್ನು ಈಗಾಗಲೇ ಪಂಚಾಯಿತಿ ರಾಜ್ ಇಂಜಿನಿಯರಿಂಗ್ ಉಪ ವಿಭಾಗಕ್ಕೆ ಮಂಜೂರು ಮಾಡಲು ಕ್ರಮವಹಿಸಿ, ಭಾಗಶಃ ಮೊತ್ತವನ್ನು ಪಾವತಿಸಿಕೊಂಡಿದ್ದು, ಪ್ರಸ್ತುತ ಸದರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದಲ್ಲಿ ಅನುದಾನದ ಕೊರತೆಯ ಕಾರಣ ಭಾಗಶಃ ಮೊತ್ತವನ್ನು ಹಿಂಪಡೆಯವುದಾಗಿ ತಿಳಿಸಿದ ಹಿನ್ನಲೆಯಲ್ಲಿ ಮಂಜೂರಾತಿ ಆದೇಶವನ್ನು ರದ್ದುಪಡಿಸಿ, ಸದರಿ ಜಾಗವನ್ನು ಬ್ಲಾಕ್ ಕಾಂಗ್ರೆಸ್ ಭವನ ಕಟ್ಟಡ ನಿರ್ಮಾಣಕ್ಕಾಗಿ ಲೀಸ್ ಆಧಾರದ ಮೇಲೆ ಮಂಜೂರು ಮಾಡಲು ಸರ್ವಾನುಮತದಿಂದ ಠರಾವು ನಂ:39ರಲ್ಲಿ ನಿರ್ಣಯ ಕೈಗೊಂಡು ಪ್ರಸ್ತಾವನೆಯನ್ನು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರಿಗೆ ಸಲ್ಲಿಸಿರುತ್ತಾರೆ.

ಅದರಂತೆ, ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರು ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 1 ಟಿಎಂಡಿ 2018, ದಿನಾಂಕ: 30.01.2018 ಮತ್ತು The Karnataka Planning Authorities (Allotment of Civic Amenity sites) Rules, 2016 ರ ನಿಯಮ (2) ರಲ್ಲಿ ತಿಳಿಸಲಾದ ಉದ್ದೇಶಗಳಿಗೆ ಹೊರತುಪಡಿಸಿ ಬೇರೆ ಉದ್ದೇಶಗಳಿಗೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ನಿವೇಶನಗಳನ್ನು ಮಂಜೂರು ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲವೆಂದು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

3) ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಕಲಬುರಗಿ ಜಿಲ್ಲೆ ಇವರು ದಿನಾಂಕ:23.07.2025ರಲ್ಲಿ ಅಫಜಲಪೂರ ಪುರಸಭೆ ವ್ಯಾಪ್ತಿಯ ಸರ್ವೆ ನಂ: 354/12ರಲ್ಲಿ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಲಾದ ನಿವೇಶನ ಸಂಖ್ಯೆ 5-5-875 (ವಿಸ್ತೀರ್ಣ 1120.60 ಚ.ಮೀ.) ಜಾಗವನ್ನು ಬ್ಲಾಕ್ ಕಾಂಗ್ರೆಸ್ ಭವನ ಕಟ್ಟಡ ನಿರ್ಮಾಣಕ್ಕಾಗಿ ಮಾರುಕಟ್ಟೆ ಮೌಲ್ಯದಂತೆ ಶೇ.100 ರಷ್ಟು ನಿಗಧಿಪಡಿಸಿ 30 ವರ್ಷ ಲೀಸ್ ಆಧಾರದ ಮೇಲೆ ಮಂಜೂರು ಮಾಡುವ ಪ್ರಸ್ತಾವನೆಯನ್ನು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರಿಗೆ ಸಲ್ಲಿಸಿರುತ್ತಾರೆ.

ಅದರಂತೆ, ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರು ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 1 ಟಿಎಂಡಿ 2018, ದಿನಾಂಕ: 30.01.2018 ಮತ್ತು The Karnataka Planning Authorities (Allotment of Civic Amenity sites) Rules, 2016 ರ ನಿಯಮ (2) ರಲ್ಲಿ ತಿಳಿಸಲಾದ ಉದ್ದೇಶಗಳಿಗೆ ಹೊರತುಪಡಿಸಿ ಬೇರೆ ಉದ್ದೇಶಗಳಿಗೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ನಿವೇಶನಗಳನ್ನು ಮಂಜೂರು ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲವೆಂದು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

4) ಅಧ್ಯಕ್ಷರು, ಬ್ಲಾಕ್ ಕಾಂಗ್ರೆಸ್ ಸಮಿತಿ, ಮಾಗಡಿ ತಾಲ್ಲೂಕು ಇವರು ಬ್ಲಾಕ್ ಕಾಂಗ್ರೆಸ್ ಕಛೇರಿ ನಿರ್ಮಾಣ ಮಾಡಲು ಪುರಸಭಾ ವ್ಯಾಪ್ತಿಯಲ್ಲಿ ನಿವೇಶನ ನೀಡುವಂತೆ ಕೋರಿರುವ ಬಗ್ಗೆ ದಿನಾಂಕ 28.04.2025ರಂದು ನಡೆದ ಮಾಗಡಿ ಪುರಸಭೆಯ ಕೌನ್ಸಿಲ್ ಸಭೆಯ ವಿಷಯ ಸಂಖ್ಯೆ:3/2 ರಲ್ಲಿ ಮಾಗಡಿ ಪುರಸಭೆ ವ್ಯಾಪ್ತಿಯಲ್ಲಿ ಲಭ್ಯವಿರುವ ನಿವೇಶನ ಸಂಖ್ಯೆ:118/2106/194 ರ ಒಟ್ಟು ವಿಸ್ತೀರ್ಣ 130+256/2*200+166/2=35319 ಚ.ಅ. ಇದ್ದು, ಅದರ ಪೈಕಿ 60*70 (4200 ಚ.ಅ.) ಜಾಗವನ್ನು ಬ್ಲಾಕ್ ಕಾಂಗ್ರೆಸ್ ಭವನ ನಿರ್ಮಾಣ ಮಾಡಲು ಮಂಜೂರು ಮಾಡುವ ಕುರಿತು ಚರ್ಚಿಸಿ, ನಿವೇಶನ ಮಂಜೂರು ಮಾಡಲು ಸರ್ಕಾರದ ಅನುಮೋದನೆ ಪಡೆದು ಮುಂದಿನ ಕ್ರಮ ಕೈಗೊಳ್ಳುವಂತೆ ಸರ್ವಾನುಮತದಿಂದ ನಿರ್ಣಯ ಕೈಗೊಂಡು, ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿ, ರಾಮನಗರ ಜಿಲ್ಲೆ ಇವರು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಸದರಿಯವರು ಸರ್ಕಾರದ ಆದೇಶ ಸಂಖ್ಯೆ: ನಅಇ 129 ಟಿಎಂಡಿ 2002, ದಿನಾಂಕ 02.06.2003ರಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಜಮೀನು ವಿಲೇವಾರಿಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದು, ಅದರಲ್ಲಿ ಸಾರ್ವಜನಿಕ ಬಹಿರಂಗ ಹರಾಜು ಮೂಲಕ ಮಾತ್ರವೇ ವಿಲೇವಾರಿ ಮಾಡಲು ಅವಕಾಶ ಕಲ್ಪಿಸಿರುವುದರಿಂದ, ಪ್ರಸ್ತಾಪಿತ ನಿವೇಶನವನ್ನು ಮಂಜೂರು ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಅದರಂತೆ, ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಏಕ ಕಡತದಲ್ಲಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರು ಸರ್ಕಾರದ ಮಾರ್ಗಸೂಚಿಗಳನ್ವಯ ಕಾಂಗ್ರೆಸ್ ಕಛೇರಿ ನಿರ್ಮಾಣಕ್ಕೆ ನಿವೇಶನ ಮಂಜೂರು ಮಾಡಲು ಅವಕಾಶವಿರುವುದಿಲ್ಲವೆಂದು ತಿಳಿಸಿರುತ್ತಾರೆ.

ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರು ಸರ್ಕಾರಕ್ಕೆ ಸಲ್ಲಿಸಿರುವ ಈ ಮೇಲ್ಕಂಡ 4 ಪ್ರಸ್ತಾವನೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ, 1) ಧಾರವಾಡ ಜಿಲ್ಲೆ ಅಣ್ಣಿಗೇರಿ ಪುರಸಭೆ ವ್ಯಾಪ್ತಿಯಲ್ಲಿನ ವಸತಿ ಬಡಾವಣೆಯಲ್ಲಿ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಲಾದ ಸ್ವತ್ತಿನ ಸಂಖ್ಯೆ:23-505-322ಬಿ, ಪ್ಲಾಟ್ ನಂ.2 ವಿಸ್ತೀರ್ಣ (1668.800 ಚ.ಮೀ) ಜಾಗವನ್ನು, 2) ಧಾರವಾಡ ಜಿಲ್ಲೆ ನವಲಗುಂದ ಪುರಸಭೆ ವ್ಯಾಪ್ತಿಯಲ್ಲಿನ ರಿ.ಸ.ನಂ: 414/1ರಲ್ಲಿ ನಾಗರಿಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ನಿವೇಶನ ಸಂಖ್ಯೆ:99 (ವಿಸ್ತೀರ್ಣ 1287.77ಚ.ಮೀ.) ಜಾಗವನ್ನು, 3) ಕಲಬುರಗಿ ಜಿಲ್ಲೆ ಅಫಜಲಪೂರ ಪುರಸಭೆ ವ್ಯಾಪ್ತಿಯಲ್ಲಿನ ಸರ್ವೆ ನಂ: 354/12ರಲ್ಲಿ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಲಾದ ನಿವೇಶನ ಸಂಖ್ಯೆ 5-5-875 (ವಿಸ್ತೀರ್ಣ 1120.60 ಚ.ಮೀ.) ಜಾಗವನ್ನು ಮತ್ತು 4) ಬೆಂಗಳೂರು ದಕ್ಷಿಣ ಜಿಲ್ಲೆ ಮಾಗಡಿ ಪುರಸಭಾ ವ್ಯಾಪ್ತಿಯಲ್ಲಿ ಲಭ್ಯವಿರುವ ನಿವೇಶನ ಸಂಖ್ಯೆ: 118/2106/194 ರ ಒಟ್ಟು ವಿಸ್ತೀರ್ಣ 130+256/2*200+166/2 = 35319 ಚ.ಅ. ಪೈಕಿ 60*70 (4200 ಚ.ಅ.) ಜಾಗವನ್ನು ಕಾಂಗ್ರೆಸ್ ಭವನ ಕಟ್ಟಡ ನಿರ್ಮಾಣ ಮಾಡಲು ಕಾಂಗ್ರೆಸ್ ಭವನ ಟ್ರಸ್ಟ್ ಬೆಂಗಳೂರು, ಇವರಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ 27 ಟಿಟಿಪಿ 2016, ದಿನಾಂಕ: 24.05.2017 ರಲ್ಲಿ The Karnataka Planning Authorities (Allotment of Civic Amenity Sites) Rules, 2016 ರ ನಿಯಮ (2) ರಲ್ಲಿ ತಿಳಿಸಲಾದ ಉದ್ದೇಶಗಳಿಗೆ ಹೊರತುಪಡಿಸಿ, ಬೇರೆ ಉದ್ದೇಶಗಳಿಗೆ ಹಂಚಿಕೆ ಮಾಡಲು ಅವಕಾಶವಿರುವುದಿಲ್ಲ.

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ನಅಇ 129 ಟಿಎಂಡಿ 2002, ದಿನಾಂಕ: 02.06.2003ರ ಕ್ರಮ ಸಂ:VIರಲ್ಲಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಸ್ವತ್ತುಗಳನ್ನು ಸಾರ್ವಜನಿಕ ಬಹಿರಂಗ ಹರಾಜು ಮೂಲಕ ಮಾತ್ರ ನೀಡಲು ಅವಕಾಶವಿರುವುದರಿಂದ ನಾಗರೀಕ ಸೌಲಭ್ಯ ನಿವೇಶನವನ್ನು ಹಂಚಿಕೆ ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಆದರೆ, ದಿನಾಂಕ:09.10.2025ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಪ್ರಸ್ತಾಪಿತ 4 ನಾಗರೀಕ ಸೌಲಭ್ಯ ನಿವೇಶನಗಳನ್ನು ಮಾರುಕಟ್ಟೆ ಮೌಲ್ಯದ ಶೇ 5 ರಷ್ಟನ್ನು ವಿಧಿಸಿ, ಖಾಯಂ ಆಗಿ ಮಂಜೂರು ಮಾಡಲು ಸಚಿವ ಸಂಪುಟವು ಅನುಮೋದನೆ ನೀಡಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ನಅಇ 11 ಟಿಎಂಡಿ 2025,**
**ಬೆಂಗಳೂರು, ದಿನಾಂಕ: 14.10.2025**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 1) ಧಾರವಾಡ ಜಿಲ್ಲೆ ಅಣ್ಣಿಗೇರಿ ಪುರಸಭೆ ವ್ಯಾಪ್ತಿಯಲ್ಲಿನ ವಸತಿ ಬಡಾವಣೆಯಲ್ಲಿ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಲಾದ ಸ್ವತ್ತಿನ ಸಂಖ್ಯೆ:23-505-322ಬಿ, ಪ್ಲಾಟ್ ನಂ.2 ವಿಸ್ತೀರ್ಣ (1668.800 ಚ.ಮೀ) ಜಾಗವನ್ನು, 2) ಧಾರವಾಡ ಜಿಲ್ಲೆ ನವಲಗುಂದ ಪುರಸಭೆ ವ್ಯಾಪ್ತಿಯಲ್ಲಿನ ರಿ.ಸ.ನಂ: 414/1ರಲ್ಲಿ ನಾಗರಿಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ನಿವೇಶನ ಸಂಖ್ಯೆ:99 (ವಿಸ್ತೀರ್ಣ 1287.77ಚ.ಮೀ.) ಜಾಗವನ್ನು 3) ಕಲಬುರಗಿ ಜಿಲ್ಲೆ ಅಫಜಲಪೂರ ಪುರಸಭೆ ವ್ಯಾಪ್ತಿಯಲ್ಲಿನ ಸರ್ವೆ ನಂ: 354/12ರಲ್ಲಿ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಲಾದ ನಿವೇಶನ ಸಂಖ್ಯೆ 5-5-875 (ವಿಸ್ತೀರ್ಣ 1120.60 ಚ.ಮೀ.) ಜಾಗವನ್ನು ಮತ್ತು 4) ಬೆಂಗಳೂರು ದಕ್ಷಿಣ ಜಿಲ್ಲೆ ಮಾಗಡಿ ಪುರಸಭಾ ವ್ಯಾಪ್ತಿಯಲ್ಲಿ ಲಭ್ಯವಿರುವ ನಿವೇಶನ ಸಂಖ್ಯೆ: 118/2106/194 ರ ಒಟ್ಟು ವಿಸ್ತೀರ್ಣ 130+256/2*200+166/2=35319 ಚ.ಅ. ಪೈಕಿ 60*70 (4200 ಚ.ಅ.) ಜಾಗವನ್ನು ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು, ಇವರಿಗೆ ಮಾರುಕಟ್ಟೆ ಮೌಲ್ಯದ ಶೇಕಡಾ 5ರಷ್ಟನ್ನು ವಿಧಿಸಿ, ಖಾಯಂ ಆಗಿ ಕಟ್ಟಡ ನಿರ್ಮಾಣದ ಉದ್ದೇಶಕ್ಕಾಗಿ ಕೆಳಕಂಡ ಷರತ್ತಿಗೊಳಪಟ್ಟು ಮಂಜೂರು ಮಾಡಿದೆ.

**ಷರತ್ತುಗಳು:**

1. ಸದರಿ ನಾಗರೀಕ ಸೌಲಭ್ಯ ನಿವೇಶನವನ್ನು ಮೇಲ್ಕಂಡ 4 ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಾಂಗ್ರೇಸ್ ಕಛೇರಿ ಕಟ್ಟಡದ ನಿರ್ಮಾಣದ ಉದ್ದೇಶಕ್ಕೆ ಹಂಚಿಕೆ ಮಾಡಿದ್ದು, ಅದನ್ನು ಹೊರತುಪಡಿಸಿ, ಬೇರೆ ಯಾವುದೇ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.
2. ಸದರಿ ನಾಗರೀಕ ಸೌಲಭ್ಯ ನಿವೇಶನವನ್ನು ಯಾವುದೇ ಸಂದರ್ಭದಲ್ಲಿ ಬೇರೆ ಯಾರಿಗೂ ಮಾರಾಟ ಮಾಡುವಂತಿಲ್ಲ, ಅಥವಾ ಗುತ್ತಿಗೆಗೆ ನೀಡುವಂತಿಲ್ಲ.

3. ಸದರಿ ನಾಗರೀಕ ಸೌಲಭ್ಯ ನಿವೇಶನವನ್ನು ಪಡೆದ ಸಂಸ್ಥೆಯು ಮೇಲಿನ ಷರತ್ತುಗಳನ್ನು ಪಾಲಿಸಲು ವಿಫಲವಾದಲ್ಲಿ ಯಾವುದೇ ಪರಿಹಾರ ನೀಡದೇ ಸದರಿ ಜಾಗದಲ್ಲಿರುವ ಕಟ್ಟಡಗಳ ಸಹಿತ ವಶಕ್ಕೆ ಪಡೆಯಲು ಸದರಿ ಸ್ಥಳೀಯ ಸಂಸ್ಥೆಗಳು ಸಂಪೂರ್ಣ ಹಕ್ಕು ಹೊಂದಿರುತ್ತದೆ.
4. ಸ್ಥಳೀಯ ಸಂಸ್ಥೆಗಳ ವತಿಯಿಂದ ಕಛೇರಿ ಕಟ್ಟಡ ನಿರ್ಮಿಸಲು ಯಾವುದೇ ಅನುದಾನ ನೀಡತಕ್ಕದ್ದಲ್ಲ.

ಈ ಆದೇಶವನ್ನು ಸಚಿವ ಸಂಪುಟವು ಪ್ರಕರಣ ಸಂಖ್ಯೆ:ಸಿ/847/2025, ದಿನಾಂಕ:09.10.2025 ರಂದು ನೀಡಿರುವ ಅನುಮೋದನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ

14/10/2025

(ಮಹಾಂತೇಶ್ ಎಸ್. ತುರಕನೂರ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ
(ಪೌರಾಡಳಿತ-2 ಮತ್ತು ಮಂಡಳಿ)

ಹೊರಡಿಸಿದೆ
ದಿನಾಂಕ: 15/10/25

**ಇವರಿಗೆ:**

1. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ವಿ.ವಿ. ಗೋಪುರ, ಬೆಂಗಳೂರು.
2. ಜಿಲ್ಲಾಧಿಕಾರಿ, ಧಾರವಾಡ ಜಿಲ್ಲೆ / ಕಲಬುರಗಿ ಜಿಲ್ಲೆ / ಬೆಂಗಳೂರು ದಕ್ಷಿಣ ಜಿಲ್ಲೆ.
3. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಧಾರವಾಡ ಜಿಲ್ಲೆ / ಕಲಬುರಗಿ ಜಿಲ್ಲೆ / ಬೆಂಗಳೂರು ದಕ್ಷಿಣ ಜಿಲ್ಲೆ.
4. ಮುಖ್ಯಾಧಿಕಾರಿ, ಅಣ್ಣಿಗೇರಿ ಪುರಸಭೆ / ನವಲಗುಂದ ಪುರಸಭೆ, ಧಾರವಾಡ ಜಿಲ್ಲೆ.
5. ಮುಖ್ಯಾಧಿಕಾರಿ, ಅಫಜಲಪೂರ ಪುರಸಭೆ, ಕಲಬುರಗಿ ಜಿಲ್ಲೆ.
6. ಮುಖ್ಯಾಧಿಕಾರಿ, ಮಾಗಡಿ ಪುರಸಭೆ, ಬೆಂಗಳೂರು ದಕ್ಷಿಣ ಜಿಲ್ಲೆ.
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:**

1. ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನಸೌಧ, ಬೆಂಗಳೂರು-(ವಿಷಯ ಸಂಖ್ಯೆ:ಸಿ/847/2025).
3. ಸರ್ಕಾರದ ಅಪರ ಕಾರ್ಯದರ್ಶಿ-4, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
4. ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.

15/10/25 15/10/25

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ದೇವನಹಳ್ಳಿ, ತಾ||, ಕಸಬಾ ಹೋ||, ಗುಟ್ಟಹಳ್ಳಿ, ಗ್ರಾಮದ ಸ.ನಂ:45ಪಿ, 46/2ಪಿ, ಮತ್ತು ಇತರೆ ಸರ್ವೆ ನಂಬರ್‌ಗಳು ಹಾಗೂ ದೇವನಹಳ್ಳಿ, ಗ್ರಾಮದ ಸರ್ವೆ ನಂ:114/1, 130/2 ಮತ್ತು 131/2ಗಳಲ್ಲಿ, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದಿಂದ ಅನುಮೋದನೆ ನೀಡಲಾಗಿರುವ ವಸತಿ ಬಡಾವಣೆಯಲ್ಲಿನ 3300.16 ಚ.ಮೀ ವಿಸ್ತೀರ್ಣದ ಸಿ.ಎ ನಿವೇಶನ ಸಂಖ್ಯೆ: 2 ಅನ್ನು ಕಾಂಗ್ರೆಸ್ ಭವನ ಟ್ರಸ್ಟ್ (ರಿ) ರವರಿಗೆ ಹಂಚಿಕೆ ಮಾಡುವ ಬಗ್ಗೆ.

**ಓದಲಾಗಿದೆ:** ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಇವರ ಪತ್ರ ಸಂಖ್ಯೆ: BMRDA/TP/Others/01/2025-26,ದಿನಾಂಕ:19-06-2025.

*****

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ, ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ರವರು, ಕಾಂಗ್ರೆಸ್ ಭವನ ಟ್ರಸ್ಟ್ (ರಿ) ರವರು ದಿನಾಂಕ:29.03.2025 ರ ಪತ್ರದಲ್ಲಿ ದೇವನಹಳ್ಳಿ, ತಾ||, ಕಸಬಾ ಹೋ||, ಗುಟ್ಟಹಳ್ಳಿ, ಗ್ರಾಮದ ಸ.ನಂ:45ಪಿ, 46/2ಪಿ, 49, 50/2,51, 52/2 ಮತ್ತು ಇತರೆ ಹಾಗೂ ದೇವನಹಳ್ಳಿ, ಗ್ರಾಮದ ಸರ್ವೆ ನಂಬರ್ 114/1, 130/2 ಮತ್ತು 131/2 ಗಳಲ್ಲಿ ಪ್ರಾಧಿಕಾರದಿಂದ ಅನುಮೋದನೆ ನೀಡಲಾಗಿರುವ ವಸತಿ ಬಡಾವಣೆಯಲ್ಲಿನ ಸಿ.ಎ ನಿವೇಶನ ಸಂಖ್ಯೆ-2 ಅನ್ನು ಮುಫತ್ತಾಗಿ ಮಂಜೂರು ಮಾಡುವಂತೆ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರವನ್ನು ಕೋರುತ್ತಾ, ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈ ಕೆಳಕಂಡಂತೆ ಪ್ರಸ್ತಾಪಿಸಲಾಗಿದೆಯೆಂದು ತಿಳಿಸಿರುತ್ತಾರೆ.

> " Whereas a Trust has been registered in the year 1993 in the name and style Congress Bhavan Trust with many aims and objectives under the main objects to acquire proper and suitable land to construct suitable Building to conduct seminars, conferences, workshops lectures discussions campaign and other meeting for the benefit of the workers".

ಸದರಿ ಪ್ರಸ್ತಾವನೆಯನ್ನು ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ 146ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:146.82ರಲ್ಲಿ, ಚರ್ಚಿಸಿ, ಈ ಕೆಳಕಂಡಂತೆ ನಿರ್ಣಯಿಸಲಾಗಿರುತ್ತದೆ.

"ಪ್ರಸ್ತಾವನೆಯ ಸಂಬಂಧ ಸಭೆಯಲ್ಲಿ, ಕೂಲಂಕುಷವಾಗಿ ಚರ್ಚಿಸಲಾಯಿತು, ಕಾಂಗ್ರೆಸ್ ಭವನ ಟ್ರಸ್ಟ್ (ರಿ) ರವರು ದೇವನಹಳ್ಳಿ, ತಾ|| ಕಸಬಾ ಹೋ|| ಗುಟ್ಟಹಳ್ಳಿ,

ಗ್ರಾಮದ ಸರ್ವೆ ನಂಬರ್ 45ಪಿ, 46/2ಪಿ, 49ಪಿ, 50/2, 51, 52/1, 52/2 ಮತ್ತು ಇತರೆ ಹಾಗೂ ದೇವನಹಳ್ಳಿ ಗ್ರಾಮದ ಸರ್ವೆ ನಂಬರ್ 114/1, 130/2 ಮತ್ತು 131/2 ಗಳಲ್ಲಿ ಪ್ರಾಧಿಕಾರದಿಂದ ಅನುಮೋದನೆ ನೀಡಲಾಗಿರುವ ವಸತಿ ಬಡಾವಣೆಯಲ್ಲಿನ ಸಿ.ಎ ನಿವೇಶನ ಸಂಖ್ಯೆ-2 ಅನ್ನು ಕಾಂಗ್ರೆಸ್ ಭವನ ಟ್ರಸ್ಟ್ (ರಿ) ರವರಿಗೆ ಮುಫತ್ತಾಗಿ ಮಂಜೂರು ಮಾಡಲು ಕೋರಿರುತ್ತಾರೆ. ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 27 ಟಿಟಿಪಿ 2016 ದಿನಾಂಕ:24.05.2017ರ ಕರ್ನಾಟಕ ಯೋಜನಾ ಪ್ರಾಧಿಕಾರಗಳ (ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆ) ನಿಯಮಗಳು, 2016 ರ ರನ್ವಯ ಸಿ.ಎ ನಿವೇಶನಗಳನ್ನು ಹಂಚಿಕೆ ಮಾಡಲು ಅವಕಾಶವಿದ್ದು, ಅರ್ಜಿದಾರರ ಸಂಸ್ಥೆಯು ಒಂದು ಖಾಸಗಿ ಸಂಸ್ಥೆಯಾಗಿರುವ ಕಾರಣ ಕೋರಿಕೆಯಂತೆ ಮುಫತ್ತಾಗಿ ಸಿ.ಎ ನಿವೇಶನವನ್ನು ಮಂಜೂರು ಮಾಡಲು ಅವಕಾಶವಿರದ ಬಗ್ಗೆ ಚರ್ಚಿಸಲಾಯಿತು. ಈ ಬಗ್ಗೆ ಸದಸ್ಯ ಕಾರ್ಯದರ್ಶಿಗಳು ಸಭೆಯ ಗಮನ ಸೆಳೆಯುತ್ತಾ, ಕರ್ನಾಟಕ ಯೋಜನಾ ಪ್ರಾಧಿಕಾರಗಳ (ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆ) ನಿಯಮಗಳು, 2016ರ ಕಂಡಿಕೆ (6) ರನ್ವಯ ಸಂಘ ಸಂಸ್ಥೆಗಳಿಗೆ ನಾಗರೀಕ ಸೌಕರ್ಯ ನಿವೇಶನಗಳನ್ನು ಹಂಚಿಕೆ ಮಾಡಲು ಅವಕಾಶವಿದೆ. ಸದರಿ ನಿಯಮಗಳ ಕಂಡಿಕೆ (11) ರಲ್ಲಿ ವಿವರಿಸಿರುವಂತೆ ಸಂಸ್ಥೆಗಳ ಆಯ್ಕೆಯಲ್ಲಿ ಅನುಸರಿಸಬೇಕಾದ ಸೂತ್ರಗಳ ಅನುಸಾರ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ ಮಾನ್ಯ ಸಂಸ್ಥೆಗಳನ್ನು ಆಯ್ಕೆ ಮಾಡಬೇಕಾಗಿರುತ್ತದೆ ಹಾಗೂ ಸದರಿ ನಿಯಮಗಳ ಕಂಡಿಕೆ (14) ರಲ್ಲಿ ವಿಧಿಸಿರುವ ಷರತ್ತುಗಳ ಪ್ರಕಾರ ಕ್ರಮವಹಿಸಬೇಕಾಗಿರುತ್ತದೆ. ಸರ್ಕಾರಿಯೇತರ ಸಂಸ್ಥೆಗಳಿಂದ ಶೇಕಡಾ 100% ರಷ್ಟು ಗುತ್ತಿಗೆ ಹಣವನ್ನು ಪಡೆದು ಸಿ.ಎ ನಿವೇಶನವನ್ನು ಮಂಜೂರು ಮಾಡುವುದು ಕ್ರಮವಾಗಿರುತ್ತದೆ. ಅಲ್ಲದೆ, ಸಿ.ಎ ನಿವೇಶನಗಳ ಹಂಚಿಕೆ ನಿಯಮಗಳನ್ವಯ ಲಭ್ಯವಿರುವ ಸಿ.ಎ ನಿವೇಶನಗಳ ಪಟ್ಟಿ, ನಿರ್ದಿಷ್ಟಪಡಿಸಿರುವ ಉದ್ದೇಶಗಳನ್ನು ನಮೂದಿಸಿ, ಅರ್ಹ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಿದ ಸಂದರ್ಭದಲ್ಲಿ ಅರ್ಜಿ ಸಲ್ಲಿಸಬೇಕಾಗಿರುತ್ತದೆ. ಪ್ರಶ್ನಿತ ವಸತಿ ಬಡಾವಣೆಯಲ್ಲಿ ಪ್ರಸ್ತುತ ಮಾರುಕಟ್ಟೆ ದರವು ಪ್ರತಿ ಚ.ಮೀ ಗೆ ರೂ.24000/-ಗಳಿದ್ದು, ಅದರಂತೆ ಸಿ.ಎ ನಿವೇಶನದ ಒಟ್ಟು ವಿಸ್ತೀರ್ಣ 3300.16 ಚ.ಮೀ ಗಳಿಗೆ ರೂ.7,92,03,840/-ಗಳನ್ನು ಅರ್ಜಿದಾರರು ಪಾವತಿಸಬೇಕಾಗಿರುತ್ತದೆ" ಎಂಬ ಅಂಶವನ್ನು ಸಭೆಯ ಗಮನಕ್ಕೆ ಸಲ್ಲಿಸಿದರು.

ಈ ಬಗ್ಗೆ ಚರ್ಚೆ ಮುಂದುವರೆದು ಈಗಾಗಲೇ ಕೆಲವೊಂದು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಇದೇ ರೀತಿಯ ಪ್ರಕರಣಗಳಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವ ಅಂಶವನ್ನು ಅಧ್ಯಕ್ಷರು ಹಾಗೂ ಪ್ರಾಧಿಕಾರದ ಸದಸ್ಯರು ಸಭೆಗೆ ವಿವರಿಸಿ, ಸದರಿ ಸಂಸ್ಥೆಯವರು ಈ ಪ್ರದೇಶದ ನಾಗರೀಕರ ಕೌಶಲ್ಯಾಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ಹೊಂದಿರುತ್ತಾರೆ. ಕಂಪ್ಯೂಟರ್ ಸಾಕ್ಷರತಾ ತರಬೇತಿ, ಟೈಲರಿಂಗ್ ತರಬೇತಿ, ಮೊಬೈಲ್ ರಿಪೇರಿ ತರಬೇತಿಯಂತಹ ಹಲವು ಸೇವಾ ಮನೋಭಾವದ ಕಾರ್ಯಕ್ರಮಗಳನ್ನು ಕೈಗೊಳ್ಳಲು ತುರ್ತಾಗಿ ಸಿ.ಎ ನಿವೇಶನವನ್ನು ಹಂಚಿಕೆ ಮಾಡಲು ಕೋರಿರುವುದರಿಂದ ಸದರಿ ಪ್ರಸ್ತಾವನೆಯನ್ನು ಬಿ.ಎಂ.ಆರ್.ಡಿ.ಎ ಮುಖಾಂತರ ಸರ್ಕಾರಕ್ಕೆ ಸಲ್ಲಿಸಬಹುದೆಂದು ತಿಳಿಸಿದರು. ಅದರಂತೆ, ಅರ್ಜಿದಾರರ ಪ್ರಸ್ತಾವನೆಯನ್ನು ಬಿ.ಎಂ.ಆರ್.ಡಿ.ಎ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು ಬಹುಮತದಿಂದ ನಿರ್ಣಯಿಸಲಾಯಿತು".

ಆದರಂತೆ, ಪ್ರಸ್ತಾಪಿತ ಸಿ.ಎ.ನಿವೇಶನವನ್ನು ಮುಫತ್ತಾಗಿ ಮಂಜೂರು ಮಾಡುವ ಕುರಿತು ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಇವರು ಸರ್ಕಾರದ ಆದೇಶ/ನಿರ್ದೇಶನ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 383 ಬಿಎಂಆರ್ 2025(ಇ),**
**ಬೆಂಗಳೂರು ದಿನಾಂಕ:16-01-2026**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ದೇವನಹಳ್ಳಿ ತಾ||, ಕಸಬಾ ಹೋ||, ಗುಟ್ಟಹಳ್ಳಿ ಗ್ರಾಮದ ಸ.ನಂ:45ಪಿ, 46/2ಪಿ, ಮತ್ತು ಇತರೆ ಸರ್ವೆ ನಂಬರ್ ಗಳು ಹಾಗೂ ದೇವನಹಳ್ಳಿ ಗ್ರಾಮದ ಸರ್ವೆ ನಂ:114/1, 130/2 ಮತ್ತು 131/2ಗಳಲ್ಲಿ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದಿಂದ ಅನುಮೋದನೆ ನೀಡಲಾಗಿರುವ ವಸತಿ ಬಡಾವಣೆಯಲ್ಲಿನ 3300.16 ಚ.ಮೀ ವಿಸ್ತೀರ್ಣದ ಸಿ.ಎ ನಿವೇಶನ ಸಂಖ್ಯೆ: 2 ಅನ್ನು ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಪ್ರಸ್ತಾಪಿತ ನಿವೇಶನದ ಮಾರ್ಗಸೂಚಿ ಮೌಲ್ಯದ ಶೇಕಡಾ 5 ರಷ್ಟನ್ನು ವಿಧಿಸಿ, ಖಾಯಂ ಆಗಿ ಮಂಜೂರು ಮಾಡಿ ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:02/01/2026 ರಂದು ನಡೆದ ಸಚಿವ ಸಂಪುಟ ಸಭೆಯ ವಿಷಯ ಸಂಖ್ಯೆ: ಸಿ/1082/2025ರಲ್ಲಿ ಕೈಗೊಂಡ ನಿರ್ಣಯದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ರಾಜೇಶ್ ಎಸ್.ಸೂಳಿಕೇರಿ)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
(ಬಿ.ಡಿ.ಎ & ಬೆಂ-1).

17/01/2026

16/1/26

**ಇವರಿಗೆ:**

1. ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
2. ಸದಸ್ಯ ಕಾರ್ಯದರ್ಶಿ, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ.
3. ಶಾಖಾ ರಕ್ಷ ಕಡತ/ ಹೆಚ್ಚುವರಿ ಪ್ರತಿ/ ಕಛೇರಿ ಪ್ರತಿ.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಚಿಕ್ಕಬಳ್ಳಾಪುರ ಜಿಲ್ಲಾ ಕಾಂಗ್ರೆಸ್ ಭವನದ ಕಟ್ಟಡದ ನಿರ್ಮಾಣ ಮಾಡುವ ಉದ್ದೇಶಕ್ಕಾಗಿ ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿರುವ ನಾಗರೀಕ ಸೌಲಭ್ಯಗಳ ನಿವೇಶನಗಳನ್ನು ರಿಯಾಯಿತಿ ದರದಲ್ಲಿ ಮಂಜೂರು ಮಾಡುವ ಬಗ್ಗೆ.

**ಓದಲಾಗಿದೆ:** ಆಯುಕ್ತರು, ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಬಳ್ಳಾಪುರ ಇವರ ಪತ್ರ ಸಂಖ್ಯೆ: ಚಿ.ನ.ಅ.ಪ್ರಾ/ನಾ.ಸೌ/01/2024-25 /1758, ದಿನಾಂಕ:06.02.2025

*******

**ಪ್ರಸ್ತಾವನೆ:**

ದಿನಾಂಕ.20|5|2025...ಹೊರಡಿಸಿದೆ

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯ ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿ ಹೋಬಳಿ ಅಗಲಗುರ್ಕಿ ಗ್ರಾಮದ ಸ.ನಂ.89/1, 89/2, 89/3 ಹಾಗೂ 90 ಮತ್ತು 91 ರಲ್ಲಿನ ಒಟ್ಟು 07ಎಕರೆ-17ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ಅಭಿವೃದ್ಧಿಪಡಿಸಿರುವ ಖಾಸಗಿ ಬಡಾವಣೆಯಲ್ಲಿರುವ 1507.57 ಚ ಮೀಟರ್ (16.227 ಚದರ ಅಡಿ) ವಿಸ್ತೀರ್ಣದ ನಾಗರೀಕ ಸೌಲಭ್ಯದ ನಿವೇಶನವನ್ನು ಕಾಂಗ್ರೆಸ್ ಭವನ್ ಟ್ರಸ್ಟ್ ಗೆ "ಚಿಕ್ಕಬಳ್ಳಾಪುರ ಜಿಲ್ಲಾ ಕಾಂಗ್ರೆಸ್ ಭವನದ" ಕಟ್ಟಡ ನಿರ್ಮಾಣ ಮಾಡುವ ಉದ್ದೇಶಕ್ಕಾಗಿ ಸಂಪೂರ್ಣ ಉಚಿತವಾಗಿ ಮಂಜೂರು ಮಾಡುವಂತೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಹಾಗೂ, ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವರು ಕೋರಿರುತ್ತಾರೆ.

ಕಾಂಗ್ರೆಸ್ ಭವನ ಟ್ರಸ್ಟ್ (ರಿ)., ಬೆಂಗಳೂರು, ಇವರ ದಿನಾಂಕ:03.01.2025ರ ಮನವಿಯಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಅಣಕನೂರು ಗ್ರಾಮದ ಸ.ನಂ.34/1 ರಲ್ಲಿ 01ಎ-00ಗು, 34/2 ರಲ್ಲಿ 01ಎ-00ಗು, 34/3 ರಲ್ಲಿ 02ಎ-00ಗು, 34/4ರಲ್ಲಿ 03ಎ-00ಗು 35/1ರಲ್ಲಿ 02ಎ-12.08ಗು ಸ.ನಂ 35/2 ರಲ್ಲಿ 02ಎ-12.08ಗು, ಸ.ನಂ. 46/1ರಲ್ಲಿ 03ಎ-00ಗು, ಸ.ನಂ. 46/2ರಲ್ಲಿ 00ಎ-35.08ಗು, ಸ.ನಂ.46/3 01ಎ-11.08ಗು ರಲ್ಲಿ ಒಟ್ಟು 16 ಎಕರೆ 32 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ವಿನ್ಯಾಸ ನಕ್ಷೆ ದಿನಾಂಕ:03.10.2022ರಂದು ಅನುಮೋದನೆಯಾಗಿರುವ ಬಡಾವಣೆಯಲ್ಲಿನ ಸಿ.ಎ ನಿವೇಶನದ ಒಟ್ಟು ವಿಸ್ತೀರ್ಣ 3404.26 ಚ.ಮೀ ಅಳತೆಯ ನಾಗರೀಕ ಸೌಲಭ್ಯ ನಿವೇಶನವನ್ನು ದಿನಾಂಕ:21.10.2022ರಂದು ಪರಿತ್ಯಾಜನ ಪ್ರಮಾಣ ಪತ್ರದ ಮುಖಾಂತರ ಪ್ರಾಧಿಕಾರಕ್ಕೆ ಹಸ್ತಾಂತರಿಸಲಾಗಿರುತ್ತದೆ. ಸದರಿ ನಿವೇಶನವನ್ನು ಕಾಂಗ್ರೆಸ್ ಭವನ ಕಟ್ಟಡ ನಿರ್ಮಾಣ ಮಾಡಲು ಕಾಂಗ್ರೆಸ್ ಭವನ ಟ್ರಸ್ಟ್ (ರಿ.), ಬೆಂಗಳೂರು ಇವರಿಗೆ ವಿಚಾರ ಸಂಕೀರ್ಣಗಳು ಸಮ್ಮೇಳನಗಳು, ಕಾರ್ಯಗಾರಗಳು, ಉಪನ್ಯಾಸ, ಚರ್ಚೆಗಳು, ಪ್ರಚಾರ ಸಭೆಗಳು ಮತ್ತು ಇತರೆ ಸಭೆಗಳನ್ನು ನಡೆಸಲು ಹಾಗೂ ಕೌಶಲ್ಯಾಭಿವೃದ್ಧಿ ತರಬೇತಿಗಳು, ಗಣಕಯಂತ್ರ ತರಬೇತಿ, ಟೈಲರಿಂಗ್ ತರಬೇತಿ ಮತ್ತು ಮೊಬೈಲ್ ರಿಪೇರಿ ತರಬೇತಿಗಳನ್ನು ನಡೆಸಲು ಉಚಿತವಾಗಿ ನಾಗರಿಕ ಸೌಲಭ್ಯದ ನಿವೇಶನವನ್ನು ಹಂಚಿಕೆ ಮಾಡುವಂತೆ ಆಯುಕ್ತರು, ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ ರವರನ್ನು ಕೋರಿರುತ್ತಾರೆ.

ಮೇಲೆ ಓದಲಾದ ಪತ್ರದಲ್ಲಿ ಆಯುಕ್ತರು, ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ ಇವರು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆ) ನಿಯಮಗಳು 1991 ರನ್ವಯ ಉಚಿತವಾಗಿ ನಾಗರಿಕ ಸೌಲಭ್ಯದ ನಿವೇಶನಗಳನ್ನು ಹಂಚಿಕೆ ಮಾಡಲು ಅವಕಾಶವಿರುವುದಿಲ್ಲ. ಆದ್ದರಿಂದ ದಿನಾಂಕ:06.02.2025ರ ಪತ್ರದಲ್ಲಿ ಸದರಿ ನಿವೇಶನದ ಒಟ್ಟು ಅಳತೆ 3404.26 ಚ.ಮೀ ಗಳಿಗೆ ಪ್ರಾಧಿಕಾರವು ನಿಗಧಿಪಡಿಸಿರುವಂತೆ ಉಪನೋಂದಣಾಧಿಕಾರಿಗಳ ಮಾರ್ಗಸೂಚಿ ಬೆಲೆ (SR Value) ಚ.ಮೀ.ಗೆ ರೂ. 12,000/-ರಂತೆ ಇದ್ದು, ಈ ನಿವೇಶನದ ಒಟ್ಟು ಮೌಲ್ಯ ರೂ. 4,08,51,120/-ಗಳಿಗೆ ಪ್ರಾರಂಭಿಕ ಠೇವಣಿ ಶೇ. 10 ರಷ್ಟು ಮೊತ್ತ ರೂ. 40,85,120/-ಗಳನ್ನು ಪಾವತಿಸಿದಲ್ಲಿ ಅರ್ಜಿಯನ್ನು ಪರಿಗಣಿಸಲಾಗುವುದು ಎಂದು ಹಾಗೂ ಬಾಕಿ ಉಳಿದ ಮೊತ್ತವನ್ನು ಮಂಜೂರಾತಿ ಪತ್ರ ನೀಡಿದ 90 ದಿನಗಳೊಳಗೆ ಪಾವತಿಸಬೇಕಾಗಿರುತ್ತದೆ ಎಂದು ಕಾಂಗ್ರೆಸ್ ಭವನ ಟ್ರಸ್ಟ (ರಿ) ಇವರಿಗೆ ಹಿಂಬರಹ ನೀಡಿರುವುದಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರಿಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು 1991ರ ನಿಯಮ 8(1) ರಲ್ಲಿ ನಾಗರಿಕ ಸೌಲಭ್ಯ ನಿವೇಶನಗಳ ಗುತ್ತಿಗೆ ಹಣವನ್ನು ನಿಗದಿಪಡಿಸಲು ಈ ಕೆಳಕಂಡಂತೆ ಅವಕಾಶ ಕಲ್ಪಿಸಲಾಗಿದೆ.

> 8(1) The lease amount of the site to be allotted on lease basis shall be fixed by the authority provided the value of the site per Sq.mtrs. is fixed at not less than the value per Sq.mtrs. of the largest residential site in that area:

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಾಂಗ್ರೆಸ್ ಭವನ ಕಟ್ಟಡ ನಿರ್ಮಾಣ ಮಾಡಲು ಕಾಂಗ್ರೆಸ್ ಭವನ ಟ್ರಸ್ಟ (ರಿ.), ಬೆಂಗಳೂರು ಇವರಿಗೆ ವಿಚಾರ ಸಂಕೀರ್ಣಗಳು ಸಮ್ಮೇಳನಗಳು, ಕಾರ್ಯಗಾರಗಳು, ಉಪನ್ಯಾಸ, ಚರ್ಚೆಗಳು, ಪ್ರಚಾರ ಸಭೆಗಳು ಮತ್ತು ಇತರ ಸಭೆಗಳನ್ನು ನಡೆಸಲು ಹಾಗೂ ಕೌಶಲ್ಯಾಭಿವೃದ್ಧಿ ತರಬೇತಿಗಳು, ಗಣಕಯಂತ್ರ ತರಬೇತಿ, ಟೈಲರಿಂಗ್ ತರಬೇತಿ ಮತ್ತು ಮೊಬೈಲ್ ರಿಪೇರಿ ತರಬೇತಿಗಳನ್ನು ನಡೆಸಲು KTCP (Allotment of Civic Amenity Sites) Rules, 2016 ರಡಿ ರಾಜಕೀಯ ಪಕ್ಷಗಳ ಭವನಗಳಿಗೆ ನಾಗರೀಕ ಸೌಲಭ್ಯ ನಿವೇಶನವನ್ನು ಉಚಿತವಾಗಿ ಹಂಚಿಕೆ ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಆದರೆ, ಪ್ರಸ್ತಾಪಿತ ನಾಗರೀಕ ಸೌಲಭ್ಯ ನಿವೇಶನದ ಒಟ್ಟು ವಿಸ್ತೀರ್ಣ 3404.26 ಚ.ಮೀ ವಿಸ್ತೀರ್ಣವುಳ್ಳ ನಾಗರಿಕ ಸೌಲಭ್ಯದ ನಿವೇಶನ ಮೌಲ್ಯದ ಶೇ. 5 ರಷ್ಟು ಮಂಜೂರಾತಿ ದರ ವಿಧಿಸಿ, ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಮಂಜೂರು ಮಾಡಲು ಸಚಿವ ಸಂಪುಟವು ವಿಷಯ ಸಂಖ್ಯೆ: ಸಿ 343/2025, ದಿನಾಂಕ:09.05.2025 ರಲ್ಲಿ ಅನುಮೋದಿಸಿರುತ್ತದೆ.

ಅದರಂತೆ, ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ನಅಇ 15 ಬೆಂರೂಪ್ರಾ 2025 (ಇ).</u>**
**<u>ಬೆಂಗಳೂರು, ದಿನಾಂಕ: 17.05.2025.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಚಿಕ್ಕಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಅಣಕನೂರು ಗ್ರಾಮದ ಸ.ನಂ.34/1 ರಲ್ಲಿ 01ಎ-00ಗು, 34/2 ರಲ್ಲಿ 01ಎ-00ಗು, 34/3 ರಲ್ಲಿ

02ಎ-00ಗು, 34/4ರಲ್ಲಿ 03ಎ-00ಗು 35/1ರಲ್ಲಿ 02ಎ-12.08ಗು ಸ.ನಂ 35/2 ರಲ್ಲಿ 02ಎ-12.08ಗು, ಸ.ನಂ. 46/1ರಲ್ಲಿ 03ಎ-00ಗು, ಸ.ನಂ. 46/2ರಲ್ಲಿ 00ಎ-35.08ಗು, ಸ.ನಂ.46/3 01ಎ-11.08ಗು ರಲ್ಲಿ ಒಟ್ಟು 16 ಎಕರೆ 32 ಗುಂಟೆ ಜಮೀನಿನ ವಸತಿ ವಿನ್ಯಾಸ ನಕ್ಷೆ ಅನುಮೋದನೆಯಾಗಿರುವ ಬಡಾವಣೆಯಲ್ಲಿನ ನಾಗರೀಕ ಸೌಲಭ್ಯ ನಿವೇಶನದ ಒಟ್ಟು ವಿಸ್ತೀರ್ಣ 3404.26 ಚ.ಮೀ ವಿಸ್ತೀರ್ಣವುಳ್ಳ ನಾಗರಿಕ ಸೌಲಭ್ಯದ ನಿವೇಶನ ಮೌಲ್ಯದ ಶೇ. 5 ರಷ್ಟು ಮಂಜೂರಾತಿ ದರ ವಿಧಿಸಿ, ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಮಂಜೂರು ಮಾಡಿ ಆದೇಶಿಸಿದ.

ಈ ಆದೇಶವನ್ನು ಸಚಿವ ಸಂಪುಟವು ಪ್ರಕರಣ ಸಂಖ್ಯೆ: ಸಿ:343/2025, ದಿನಾಂಕ:09.05.2025 ರಂದು ನೀಡಿರುವ ಅನುಮೋದನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

17/05/25

**(ಲತಾ.ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ.
17/05/2025

**ಇವರಿಗೆ:**

1. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ, ಬೆಂಗಳೂರು.
2. ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.
3. ಆಯುಕ್ತರು, ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಬಳ್ಳಾಪುರ
4. ಕಾಂಗ್ರೆಸ್ ಭವನ ಟ್ರಸ್ಟ್ (ರಿ.), ಇಂದಿರಾ ಗಾಂಧಿ ಭವನ್ ನಂ.12, ಜಸ್ಮ ಭವನ್ ರೋಡ್ ಬೆಂಗಳೂರು-560052
5. ಸರ್ಕಾರದ ಅಪರ ಕಾರ್ಯದರ್ಶಿ, ಸಚಿವ ಸಂಪುಟ **(ಪ್ರಕರಣ ಸಂಖ್ಯೆ: ಸಿ: 343/2025)**, ವಿಧಾನಸೌಧ, ಬೆಂಗಳೂರು.
6. ಮಾನ್ಯ ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
7. ಸಂಬಂಧಪಟ್ಟವರಿಗೆ – ಆಯುಕ್ತರು, ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಬಳ್ಳಾಪುರ ರವರ ಮುಖಾಂತರ.
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಒಡೆತನದಲ್ಲಿರುವ ಕೊಪ್ಪಳ ಗ್ರಾಮದ ಸ.ನಂ.150/1, 2, 3, 4, 5, 10, 12, 14 ರ ಕ್ಷೇತ್ರ 12ಎಕರೆ-28ಗುಂಟೆ ಬಡಾವಣೆಯಲ್ಲಿರುವ ಒಟ್ಟು 3749.85 ಚ.ಮೀ. ವಿಸ್ತೀರ್ಣವುಳ್ಳ ನಾಗರಿಕ ಸೌಲಭ್ಯ ನಿವೇಶನವನ್ನು ಕಾಂಗ್ರೇಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಕಛೇರಿ ಕಟ್ಟಡದ ನಿರ್ಮಾಣದ ಉದ್ದೇಶಕ್ಕಾಗಿ ರಿಯಾಯಿತಿ ದರದಲ್ಲಿ ಮಂಜೂರು ಮಾಡುವ ಬಗ್ಗೆ.

**ಓದಲಾಗಿದೆ:**

1. ಆಯುಕ್ತರು, ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರ, ಕೊಪ್ಪಳ ಇವರ ಪತ್ರ ಸಂಖ್ಯೆ: ಕೊನಪ್ರಾ/ನಾ.ಸೌ.ನಿ. ಹಂಚಿಕೆ/2024-25/1085, ದಿನಾಂಕ:19.03.2025.
2. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ ರವರ ಪತ್ರ ಸಂಖ್ಯೆ: DTCP-TECHOMISC/259/2025, ದಿನಾಂಕ:17.06.2025.

*******

**ಪ್ರಸ್ತಾವನೆ:**

ದಿನಾಂಕ.1.6|9|2025......ಹೊರಡಿಸಿದೆ

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಪತ್ರದಲ್ಲಿ, ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಒಡೆತನದಲ್ಲಿರುವ ಕೊಪ್ಪಳ ಗ್ರಾಮದ ಸ.ನಂ.150/1, 2, 3, 4, 5, 10, 12, 14 ರ ಕ್ಷೇತ್ರ 12ಎಕರೆ-28ಗುಂಟೆ ಬಡಾವಣೆಯಲ್ಲಿರುವ ನಾಗರಿಕ ಸೌಲಭ್ಯ ನಿವೇಶನದ ವಿಸ್ತೀರ್ಣ 3749.85 ಚ.ಮೀ. ಕಾಂಗ್ರೇಸ್ ಭವನ ಟ್ರಸ್ಟ್, ಕೊಪ್ಪಳ ಇವರಿಗೆ ಕಛೇರಿ ಕಟ್ಟಡದ ನಿರ್ಮಾಣದ ಉದ್ದೇಶಕ್ಕಾಗಿ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಲು ಸದರಿ ಸಂಸ್ಥೆಯವರಿಗೆ ಹಣ ಸಂದಾಯ ಮಾಡಲು ಪತ್ರ ಬರೆಯಲಾಗಿರುತ್ತದೆ. ಮುಂದುವರೆಯುತ್ತಾ, ಸದರಿ ನಾಗರಿಕ ಸೌಲಭ್ಯ ನಿವೇಶನದ ಮೊತ್ತ ರೂ.1,31,31,975.00 (ಒಂದು ಕೋಟಿ ಮೂವತ್ತೊಂದು ಲಕ್ಷದ ಮೂವತ್ತೊಂದು ಸಾವಿರದ ಒಂಭತ್ತು ನೂರಾ ಎಪ್ಪತ್ತೈದು ರೂಪಾಯಿಗಳು ಮಾತ್ರ) ಗಳಾಗುತ್ತಿದ್ದು ಈ ಸಂಬಂಧ ಶೇ.10 ರಂತೆ ರೂ.13,19,948.00 ಗಳನ್ನು ಸಂದಾಯ ಮಾಡಿದ್ದು ಇದೇ ಮೊತ್ತಕ್ಕೆ ಹಂಚಿಕೆ ಮಾಡಲು ಅಧ್ಯಕ್ಷರು, ಕಾಂಗ್ರೇಸ್ ಭವನ ಟ್ರಸ್ಟ್, ಕೊಪ್ಪಳ ರವರು ಕೋರಿರುತ್ತಾರೆ. ನಾಗರಿಕ ಸೌಲಭ್ಯ ನಿವೇಶನ ಹಂಚಿಕೆ ನಿಯಮ 1991 ರ ಪ್ರಕಾರ ಪೂರ್ಣ ಮೊತ್ತ ಪಾವತಿಸಿದ ನಂತರದಲ್ಲಿ ಹಂಚಿಕೆ ಮಾಡಬೇಕಾಗಿರುತ್ತದೆ. ಸದರಿ ಮೊತ್ತಕ್ಕೆ ನಾಗರಿಕ ಸೌಲಭ್ಯ ನಿವೇಶನವನ್ನು ಮಂಜೂರು ಮಾಡಲು ಮಾರ್ಗದರ್ಶನ ನೀಡುವಂತೆ ಆಯುಕ್ತರು, ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರ ರವರು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 2 ಮತ್ತು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ (ನಾಗರಿಕ ಸೌಲಭ್ಯ ನಿವೇಶನ ಹಂಚಿಕೆ) ನಿಯಮ 1991ರಂತೆ ರಾಜಕೀಯ ಪಕ್ಷಗಳ ಭವನಗಳಿಗೆ ಹಂಚಿಕೆ ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಆದ್ದರಿಂದ, ಕಾಂಗ್ರೇಸ್ ಭವನ ಟ್ರಸ್ಟ್, ಕಟ್ಟಡ

ನಿರ್ಮಿಸುವ ಉದ್ದೇಶಕ್ಕೆ ನಾಗರಿಕ ಸೌಲಭ್ಯ ನಿವೇಶನವನ್ನು ಮಂಜೂರಾತಿ ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ ಎಂದು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ ರವರು ತಿಳಿಸಿರುತ್ತಾರೆ.

ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಒಡೆತನದಲ್ಲಿರುವ ಕೊಪ್ಪಳ ಗ್ರಾಮದ ಸ.ನಂ.150/1, 2, 3, 4, 5, 10, 12, 14 ರ ಕ್ಷೇತ್ರ 12ಎಕರೆ-28ಗುಂಟೆ ಬಡಾವಣೆಯಲ್ಲಿನ 3749.85 ಚ.ಮೀ. ವಿಸ್ತೀರ್ಣವುಳ್ಳ ನಾಗರೀಕ ಸೌಲಭ್ಯ ನಿವೇಶನವನ್ನು ಕಾಂಗ್ರೆಸ್ ಭವನ ಟ್ರಸ್ಟ್, ಕೊಪ್ಪಳ ಇವರಿಗೆ ಕಾಯ್ದಿರಿಸಲಾಗಿದೆ. ಸದರಿ ನಾಗರೀಕ ಸೌಲಭ್ಯ ನಿವೇಶನವನ್ನು ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ KTCP (Allotment of Civic Amenity Sites) Rules, 2016 ರಡಿ ರಾಜಕೀಯ ಪಕ್ಷಗಳ ಭವನಗಳಿಗೆ ಉಚಿತವಾಗಿ ಹಂಚಿಕೆ ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಆದರೆ, ಸಚಿವ ಸಂಪುಟವು ವಿಷಯ ಸಂಖ್ಯೆ: ಸಿ 686/2025, ದಿನಾಂಕ:04.09.2025 ರಲ್ಲಿ ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಒಡೆತನದಲ್ಲಿರುವ ಕೊಪ್ಪಳ ಗ್ರಾಮದ ಸ.ನಂ.150/1, 2, 3, 4, 5, 10, 12, 14 ರ ಕ್ಷೇತ್ರ 12ಎಕರೆ-28ಗುಂಟೆ ಬಡಾವಣೆಯಲ್ಲಿರುವ ಒಟ್ಟು 3749.85 ಚ.ಮೀ. ವಿಸ್ತೀರ್ಣವುಳ್ಳ ನಾಗರಿಕ ಸೌಲಭ್ಯ ನಿವೇಶನವನ್ನು ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಕಛೇರಿ ಕಟ್ಟಡದ ನಿರ್ಮಾಣದ ಉದ್ದೇಶಕ್ಕಾಗಿ ಸದರಿ ನಿವೇಶನದ ಪ್ರಚಲಿತ ಮಾರ್ಗಸೂಚಿ ಮೌಲ್ಯದ ಶೇಕಡಾ 5 ರಷ್ಟನ್ನು ವಿಧಿಸಿ ಖಾಯಂ ಆಗಿ ಮಂಜೂರು ಮಾಡಲು ತೀರ್ಮಾನಿಸಿರುತ್ತದೆ.

ಅದರಂತೆ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 91 ಗುಅಪ್ರಾ 2025 (ಇ), ಬೆಂಗಳೂರು, ದಿನಾಂಕ:15.09.2025.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಒಡೆತನದಲ್ಲಿರುವ ಕೊಪ್ಪಳ ಗ್ರಾಮದ ಸ.ನಂ.150/1, 2, 3, 4, 5, 10, 12, 14 ರ ಕ್ಷೇತ್ರ 12ಎಕರೆ-28ಗುಂಟೆ ಬಡಾವಣೆಯಲ್ಲಿರುವ ಒಟ್ಟು 3749.85 ಚ.ಮೀ. ವಿಸ್ತೀರ್ಣವುಳ್ಳ ನಾಗರಿಕ ಸೌಲಭ್ಯ ನಿವೇಶನವನ್ನು ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಕಛೇರಿ ಕಟ್ಟಡದ ನಿರ್ಮಾಣದ ಉದ್ದೇಶಕ್ಕಾಗಿ ಸದರಿ ನಿವೇಶನದ ಪ್ರಚಲಿತ ಮಾರ್ಗಸೂಚಿ ಮೌಲ್ಯದ ಶೇಕಡಾ 5 ರಷ್ಟನ್ನು ವಿಧಿಸಿ ಈ ಕೆಳಕಂಡ ಷರತ್ತಿಗೊಳಪಟ್ಟು ಖಾಯಂ ಆಗಿ ಮಂಜೂರು ಮಾಡಿ ಆದೇಶಿಸಿದೆ.

**ಷರತ್ತುಗಳು:**

1. ಸದರಿ ಜಾಗವನ್ನು ಕೊಪ್ಪಳ ಜಿಲ್ಲೆಯಲ್ಲಿ ಕಛೇರಿ ಕಟ್ಟಡದ ನಿರ್ಮಾಣದ ಉದ್ದೇಶಕ್ಕೆ ಹಂಚಿಕೆ ಮಾಡಿದ್ದು, ಅದನ್ನು ಹೊರತುಪಡಿಸಿ, ಬೇರೆ ಯಾವುದೇ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.
2. ಈ ಜಾಗವನ್ನು ಯಾವುದೇ ಸಂದರ್ಭದಲ್ಲಿ ಬೇರೆ ಯಾರಿಗೂ ಮಾರಾಟ ಮಾಡುವಂತಿಲ್ಲ ಅಥವಾ ಗುತ್ತಿಗೆಗೆ ನೀಡುವಂತಿಲ್ಲ.

3. ಈ ಜಾಗವನ್ನು ಪಡೆದ ಸಂಸ್ಥೆಯು ಮೇಲಿನ ಷರತ್ತುಗಳನ್ನು ಪಾಲಿಸಲು ವಿಫಲವಾದಲ್ಲಿ ಯಾವುದೇ ಪರಿಹಾರ ನೀಡದೇ ಸದರಿ ಜಾಗದಲ್ಲಿರುವ ಕಟ್ಟಡಗಳ ಸಹಿತ ವಶಕ್ಕೆ ಪಡೆಯಲು ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರವು ಸಂಪೂರ್ಣ ಹಕ್ಕು ಹೊಂದಿರುತ್ತದೆ.
4. ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕಛೇರಿ ಕಟ್ಟಡದ ನಿರ್ಮಿಸಲು ಯಾವುದೇ ಅನುದಾನ ನೀಡತಕ್ಕದ್ದಲ್ಲ.

ಈ ಆದೇಶವನ್ನು ಸಚಿವ ಸಂಪುಟವು ಪ್ರಕರಣ ಸಂಖ್ಯೆ: ಸಿ:686/2025, ದಿನಾಂಕ:04.09.2025 ರಂದು ನೀಡಿರುವ ಅನುಮೋದನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

15/09/25

**(ಲತಾ.ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ.

15/9/25

**ಇವರಿಗೆ:**

1. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ, ಬೆಂಗಳೂರು.
2. ಜಿಲ್ಲಾಧಿಕಾರಿ, ಕೊಪ್ಪಳ ಜಿಲ್ಲೆ, ಕೊಪ್ಪಳ.
3. ಆಯುಕ್ತರು, ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರ, ಕೊಪ್ಪಳ
4. ಕಾಂಗ್ರೆಸ್ ಭವನ ಟ್ರಸ್ಟ್ (ರಿ.), ಇಂದಿರಾ ಗಾಂಧಿ ಭವನ್ ನಂ.12, ಜಸ್ಮ ಭವನ್ ರೋಡ್ ಬೆಂಗಳೂರು-560052
5. ಸರ್ಕಾರದ ಅಪರ ಕಾರ್ಯದರ್ಶಿ, ಸಚಿವ ಸಂಪುಟ **(ಪ್ರಕರಣ ಸಂಖ್ಯೆ: ಸಿ: 686/2025, ದಿನಾಂಕ:04.09.2025)**, ವಿಧಾನಸೌಧ, ಬೆಂಗಳೂರು.
6. ಮಾನ್ಯ ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
7. ಸಂಬಂಧಪಟ್ಟವರಿಗೆ – ಆಯುಕ್ತರು, ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರ, ಕೊಪ್ಪಳ ರವರ ಮುಖಾಂತರ.
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

16/9/25

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ವಿವೇಕಾನಂದ ಬಡಾವಣೆಯಲ್ಲಿರುವ ನಾಗರಿಕ ಸೌಲಭ್ಯ ನಿವೇಶನ ಸಂಖ್ಯೆ: 1/ಬಿ ರಲ್ಲಿ 1457.8 ಚ.ಮೀ. ವಿಸ್ತೀರ್ಣದ ನಾಗರಿಕ ಸೌಲಭ್ಯ ನಿವೇಶನವನ್ನು ಮಂಡ್ಯ ಜಿಲ್ಲಾ ಕಾಂಗ್ರೆಸ್ ಭವನದ ಕಟ್ಟಡದ ನಿರ್ಮಾಣ ಮಾಡುವ ಉದ್ದೇಶಕ್ಕಾಗಿ ಮಂಜೂರು ಮಾಡುವ ಬಗ್ಗೆ.

**ಓದಲಾಗಿದೆ:**
1. ಆಯುಕ್ತರು, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ, ಮಂಡ್ಯ ಇವರ ಪತ್ರ ಸಂಖ್ಯೆ: ಮಂನಪ್ರಾ/ಸಿ.ಎ.ನಿವೇಶನ/2024-25/989, ದಿನಾಂಕ:17.02.2025 ಮತ್ತು ಮಂನಪ್ರಾ/ಸಿ.ಎ.ನಿವೇಶನ/2024-25/366, ದಿನಾಂಕ:18.07.2025.
2. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ ರವರ ಪತ್ರ ಸಂಖ್ಯೆ: 1709937, ದಿನಾಂಕ:16.04.2025.

12|11|2025

*******

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಪತ್ರಗಳಲ್ಲಿ ಆಯುಕ್ತರು, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ, ಮಂಡ್ಯ ರವರು "ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆ ಉಪ ಸಮಿತಿಯು" ಜಿಲ್ಲಾ ಕಾಂಗ್ರೆಸ್ ಸಮಿತಿ ಭವನ ಇವರಿಗೆ ವಿವೇಕಾನಂದ ಬಡಾವಣೆಯ ನಾಗರೀಕ ಸೌಲಭ್ಯ ನಿವೇಶನ ಸಂಖ್ಯೆ:1/ಬಿರ 1457.8 ಚ.ಮೀ ನಾಗರೀಕ ಸೌಲಭ್ಯ ನಿವೇಶನವನ್ನು ಹಂಚಿಕೆ ಮಾಡಲು ತೀರ್ಮಾನಿಸಿ, ಸದರಿ ನಾಗರೀಕ ನಿವೇಶನಕ್ಕೆ ರೂ.1,45,78,000/-ಗಳನ್ನು ನಿಗಧಿಪಡಿಸಲಾಗಿರುತ್ತದೆ. ಕರ್ನಾಟಕ ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ ನಿಯಮ 1991 ರ ನಿಯಮದಂತೆ ಸರ್ಕಾರಿ ಮತ್ತು ಖಾಸಗಿ ಸಂಘ ಸಂಸ್ಥೆಗಳಿಗೆ ಹಂಚಿಕೆ ಮಾಡಲು ಮಾತ್ರ ನಿಯಮದಲ್ಲಿ ಅವಕಾಶವಿರುತ್ತದೆ ಎಂಬ ಅಂಶದೊಂದಿಗೆ ಸರ್ಕಾರದ ಅವಗಾಹನೆಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ) ನಿಯಮಗಳ 1991 ರ ನಿಯಮ 2(ಡಿ) ಯಲ್ಲಿ ಸಂಸ್ಥೆ (Institution) ಗೆ ಪರಿಭಾಷೆ (Definition) ನೀಡಲಾಗಿದೆ. ಅದರನ್ವಯ ನಾಗರೀಕ ಸೌಲಭ್ಯ ನಿವೇಶನಗಳನ್ನು ಯಾವುದೇ ಸಂಸ್ಥೆಗೆ ಹಂಚಿಕೆ ಮಾಡಬೇಕಾದಲ್ಲಿ ಪ್ರಾಧಿಕಾರವು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ ಕಲಂ 2(ಹೆಚ್)ರಲ್ಲಿ ನಮೂದಿಸಿರುವ

ಉದ್ದೇಶಗಳಿಗೆ ಮಾತ್ರ ಹಂಚಿಕೆ ಮಾಡಲು ಅವಕಾಶವಿದ್ದು, ಅದರಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ಭವನ ರವರಿಗೆ ಹಂಚಿಕೆ ಮಾಡಲು ಅವಕಾಶವಿರುವುದಿಲ್ಲ ಎಂದು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ ರವರು ಅಭಿಪ್ರಾಯಿಸಿರುತ್ತಾರೆ.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987 ರ ಕಲಂ 2(ಹೆಚ್) ರಲ್ಲಿ ನಮೂದಿಸಿರುವ ಉದ್ದೇಶಗಳಿಗೆ ಮಾತ್ರ ಸಿ.ಎ. ನಿವೇಶನ ಹಂಚಿಕೆ ಮಾಡಲು ಅವಕಾಶವಿರುತ್ತದೆ. ಸದರಿ ಕಾಯ್ದೆ ಪ್ರಕಾರ ಮಂಡ್ಯ ಜಿಲ್ಲಾ ಕಾಂಗ್ರೆಸ್ ಭವನಕ್ಕೆ ಕಟ್ಟಡ ನಿರ್ಮಾಣ ಮಾಡುವ ಉದ್ದೇಶಕ್ಕಾಗಿ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ವಿವೇಕಾನಂದ ಬಡಾವಣೆಯಲ್ಲಿರುವ ನಾಗರಿಕ ಸೌಲಭ್ಯ ನಿವೇಶನ ಸಂಖ್ಯೆ: 1/ಬಿ ನ್ನು ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಮಂಜೂರು ಮಾಡಲು ಅವಕಾಶವಿರುವುದಿಲ್ಲ.

ಆದರೆ, ಸಚಿವ ಸಂಪುಟವು ವಿಷಯ ಸಂಖ್ಯೆ: ಸಿ 877/2025, ದಿನಾಂಕ:30.10.2025 ರಲ್ಲಿ ಮಂಡ್ಯ ಜಿಲ್ಲಾ ಕಾಂಗ್ರೆಸ್ ಭವನದ ಕಟ್ಟಡದ ನಿರ್ಮಾಣ ಮಾಡುವ ಉದ್ದೇಶಕ್ಕಾಗಿ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ವಿವೇಕಾನಂದ ಬಡಾವಣೆಯಲ್ಲಿರುವ ನಾಗರಿಕ ಸೌಲಭ್ಯ ನಿವೇಶನ ಸಂಖ್ಯೆ:1/ಬಿ ರಲ್ಲಿ 1457.8 ಚ.ಮೀ. ವಿಸ್ತೀರ್ಣದ ನಿವೇಶನವನ್ನು ಹಂಚಿಕೆ ಮೊತ್ತದ ಶೇಕಡ 5 ರಷ್ಟು ವಿಧಿಸಿ ಮಂಜೂರು ಮಾಡಲು ತೀರ್ಮಾನಿಸಿರುತ್ತದೆ.

ಅದರಂತೆ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 83 ಮೈಅಪ್ರಾ 2025 (ಇ),**
**ಬೆಂಗಳೂರು, ದಿನಾಂಕ: 06.11.2025**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಮಂಡ್ಯ ಜಿಲ್ಲಾ ಕಾಂಗ್ರೆಸ್ ಭವನದ ಕಟ್ಟಡದ ನಿರ್ಮಾಣ ಮಾಡುವ ಉದ್ದೇಶಕ್ಕಾಗಿ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ವಿವೇಕಾನಂದ ಬಡಾವಣೆಯಲ್ಲಿರುವ ನಾಗರೀಕ ಸೌಲಭ್ಯ ನಿವೇಶನ ಸಂಖ್ಯೆ:1/ಬಿ ರಲ್ಲಿ 1457.8 ಚ.ಮೀ. ವಿಸ್ತೀರ್ಣದ ನಿವೇಶನವನ್ನು ಹಂಚಿಕೆ ಮೊತ್ತದ ಶೇಕಡ 5 ರಷ್ಟು ವಿಧಿಸಿ ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಮಂಜೂರು ಮಾಡಿ ಆದೇಶಿಸಿದೆ.

**ಷರತ್ತುಗಳು:**

1. ಸದರಿ ಜಾಗವನ್ನು ಮಂಡ್ಯ ಜಿಲ್ಲಾ ಕಾಂಗ್ರೆಸ್ ಭವನದ ಕಟ್ಟಡದ ನಿರ್ಮಾಣ ಉದ್ದೇಶಕ್ಕೆ ಹಂಚಿಕೆ ಮಾಡಿದ್ದು, ಅದನ್ನು ಹೊರತುಪಡಿಸಿ, ಬೇರೆ ಯಾವುದೇ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.

2. ಈ ಜಾಗವನ್ನು ಯಾವುದೇ ಸಂದರ್ಭದಲ್ಲಿ ಬೇರೆ ಯಾರಿಗೂ ಮಾರಾಟ ಮಾಡುವಂತಿಲ್ಲ ಅಥವಾ ಗುತ್ತಿಗೆಗೆ ನೀಡುವಂತಿಲ್ಲ.
3. ಈ ಜಾಗವನ್ನು ಪಡೆದ ಸಂಸ್ಥೆಯು ಮೇಲಿನ ಷರತ್ತುಗಳನ್ನು ಪಾಲಿಸಲು ವಿಫಲವಾದಲ್ಲಿ ಯಾವುದೇ ಪರಿಹಾರ ನೀಡದೇ ಸದರಿ ಜಾಗದಲ್ಲಿರುವ ಕಟ್ಟಡಗಳ ಸಹಿತ ವಶಕ್ಕೆ ಪಡೆಯಲು ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರವು ಸಂಪೂರ್ಣ ಹಕ್ಕು ಹೊಂದಿರುತ್ತದೆ.
4. ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕಛೇರಿ ಕಟ್ಟಡದ ನಿರ್ಮಿಸಲು ಯಾವುದೇ ಅನುದಾನ ನೀಡತಕ್ಕದ್ದಲ್ಲ.

ಈ ಆದೇಶವನ್ನು ಸಚಿವ ಸಂಪುಟವು ಪ್ರಕರಣ ಸಂಖ್ಯೆ: ಸಿ:877/2025, ದಿನಾಂಕ:30.10.2025 ರಂದು ನೀಡಿರುವ ಅನುಮೋದನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

06/11/25

**(ಲತಾ.ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ.

**ಇವರಿಗೆ:**

1. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ, ಬೆಂಗಳೂರು.
2. ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ, ಮಂಡ್ಯ.
3. ಆಯುಕ್ತರು, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ, ಮಂಡ್ಯ
4. ಕಾಂಗ್ರೆಸ್ ಭವನ ಟ್ರಸ್ಟ್ (ರಿ.), ಇಂದಿರಾ ಗಾಂಧಿ ಭವನ್ ನಂ.12, ಜಸ್ಮ ಭವನ್ ರೋಡ್ ಬೆಂಗಳೂರು-560052
5. ಸರ್ಕಾರದ ಅಪರ ಕಾರ್ಯದರ್ಶಿ, ಸಚಿವ ಸಂಪುಟ **(ಪ್ರಕರಣ ಸಂಖ್ಯೆ: ಸಿ: 877/2025, ದಿನಾಂಕ:30.10.2025)**, ವಿಧಾನಸೌಧ, ಬೆಂಗಳೂರು.
6. ಮಾನ್ಯ ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
7. ಸಂಬಂಧಪಟ್ಟವರಿಗೆ – ಆಯುಕ್ತರು, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ, ಮಂಡ್ಯ ರವರ ಮುಖಾಂತರ.
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

12/11/25
12/11/25



3

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಚನ್ನರಾಯಪಟ್ಟಣ ಅಮಾನಿಕೆರೆ ಗ್ರಾಮದ ಸ.ನಂ. 152/1, 2, 3, 4, 151/1 ಮತ್ತು 153/2 ರ ವಿನ್ಯಾಸದಲ್ಲಿ ಕಾಯ್ದಿರಿಸಿದ ಸಿ.ಎ.ನಿವೇಶನದ ಕ್ಷೇತ್ರ 799ಚ.ಮೀ ಪೈಕಿ 210ಚ.ಮೀ ಸೌಲಭ್ಯ ನಿವೇಶನವನ್ನು ಕಾಂಗ್ರೆಸ್ ಭವನ ಟ್ರಸ್ಟ್(ರಿ), ಬೆಂಗಳೂರು ಇವರಿಗೆ ಮಂಜೂರು ಮಾಡುವ ಬಗ್ಗೆ.

**ಓದಲಾಗಿದೆ:**
1. ಸದಸ್ಯ ಕಾರ್ಯದರ್ಶಿ, ಚನ್ನರಾಯಪಟ್ಟಣ ಯೋಜನಾ ಪ್ರಾಧಿಕಾರ ರವರ ಪತ್ರ ಸಂಖ್ಯೆ:ಸ್ಥ.ಯೋ.ಪ್ರಾ.ಚ.ರಾ.ಪ:ಸಿ.ಎ,ಹಂಚಿಕೆ:07: 2025-26, ದಿನಾಂಕ:25.07.2025.
2. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ, ಬೆಂಗಳೂರು ಇವರ ಏಕ ಕಡತ ಸಂಖ್ಯೆ:DTCP-TECHOMISC/390/2025, ದಿನಾಂಕ: 31.07.2025.

*******

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ, ಕಾಂಗ್ರೆಸ್ ಭವನ ಟ್ರಸ್ಟ್(ರಿ), ಬೆಂಗಳೂರು ರವರು ವಿಚಾರ ಸಂಕೀರ್ಣಗಳು ಸಮ್ಮೇಳನಗಳು, ಕಾರ್ಯಗಾರಗಳು, ಉಪನ್ಯಾಸ, ಚರ್ಚೆಗಳು, ಪ್ರಚಾರ ಸಭೆಗಳು ಮತ್ತು ಇತರೆ ಸಭೆಗಳನ್ನು ನಡೆಸಲು ಹಾಗೂ ಕೌಶಲ್ಯಾಭಿವೃದ್ಧಿ ತರಬೇತಿಗಳು, ಗಣಕಯಂತ್ರ ತರಬೇತಿ, ಟೈಲರಿಂಗ್ ತರಬೇತಿ ಮತ್ತು ಮೊಬೈಲ್ ರಿಪೇರಿ ತರಬೇತಿಗಳನ್ನು ನಡೆಸಲು ಚನ್ನರಾಯಪಟ್ಟಣ ಅಮಾನಿಕೆರೆ ಗ್ರಾಮದ ಸ.ನಂ.152/1, 2, 3, 4, 151/1 ಮತ್ತು 153/2 ರಲ್ಲಿ ಒಟ್ಟು 3ಎಕರೆ-34ಗುಂಟೆ ಪ್ರದೇಶದ ಬಹುನಿವೇಶನ ವಿನ್ಯಾಸದಲ್ಲಿ ಕಾಯ್ದಿರಿಸಿದ ನಾಗರೀಕ ಸೌಲಭ್ಯ ನಿವೇಶನವನ್ನು ಮಂಜೂರು ಮಾಡಲು ಕೋರಿರುತ್ತಾರೆ. ಚನ್ನರಾಯಪಟ್ಟಣ ಯೋಜನಾ ಪ್ರಾಧಿಕಾರದಲ್ಲಿ ಲಭ್ಯವಿರುವ ಬಹುನಿವೇಶನ ವಿನ್ಯಾಸದಲ್ಲಿ ಕಾಯ್ದಿರಿಸಿದ ಸಿ.ಎ. ನಿವೇಶನದ ಕ್ಷೇತ್ರ 799ಚ.ಮೀ ಪೈಕಿ 210ಚ.ಮೀ ವಿಸ್ತೀರ್ಣಕ್ಕೆ ಮಾರುಕಟ್ಟೆ ದರದಂತೆ ರೂ.27,30,600.00 ಗೆ ಕರಾರು ಮೊತ್ತ ನಿಗದಿಪಡಿಸಲಾಗಿದೆ. ಸಿ.ಎ ನಿವೇಶನ ಹಂಚಿಕೆ ನಿಯಮಗಳಲ್ಲಿ ರಾಜಕೀಯ ಪಕ್ಷಗಳಿಗೆ ಸಿ.ಎ ನಿವೇಶಗಳನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲವೆಂದು ಸದಸ್ಯ ಕಾರ್ಯದರ್ಶಿ ಚನ್ನರಾಯಪಟ್ಟಣ ಯೋಜನಾ ಪ್ರಾಧಿಕಾರ ರವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಏಕ ಕಡತದಲ್ಲಿ ಕರ್ನಾಟಕ ಯೋಜನಾ ಪ್ರಾಧಿಕಾರಗಳ(ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆ) ನಿಯಮಗಳು 2016 ರಲ್ಲಿ Institution ಪರಿಭಾಷೆ ನೀಡಲಾಗಿದ್ದು, ಅದರನ್ವಯ ನಾಗರೀಕ ಸೌಲಭ್ಯ ನಿವೇಶನವನ್ನು ಯಾವುದೇ ಸಂಸ್ಥೆಗೆ ಹಂಚಿಕೆ ಮಾಡಬೇಕಾದಲ್ಲಿ ಪ್ರಾಧಿಕಾರವು KTCP (ಸಿ.ಎ.ನಿವೇಶನ ಹಂಚಿಕೆ) ನಿಯಮಗಳ "civic amenity" ರಡಿಯಲ್ಲಿ ನಮೂದಿಸಿರುವ ಉದ್ದೇಶಗಳಿಗೆ ಮಾತ್ರ ಹಂಚಿಕೆ ಮಾಡಲು ಅವಕಾಶವಿರುತ್ತದೆ. ನಗರಾಭಿವೃದ್ಧಿ ಪ್ರಾಧಿಕಾರದ ಸಿಎ ನಿವೇಶನವನ್ನು ರಾಜಕೀಯ ಪಕ್ಷಗಳ ಭವನಗಳಿಗೆ ಹಂಚಿಕೆ ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಆದ್ದರಿಂದ ಪ್ರಶ್ನಿತ ಸಿ.ಎ ನಿವೇಶನವನ್ನು ಕಾಂಗ್ರೆಸ್ ಭವನ ಟ್ರಸ್ಟ್ ರವರಿಗೆ ಹಂಚಿಕೆ ಮಾಡಲು ಅವಕಾಶವಿರುವುದಿಲ್ಲವೆಂದು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ, ಬೆಂಗಳೂರು ರವರು ವರದಿ ಸಲ್ಲಿಸಿರುತ್ತಾರೆ.

...2

ಚನ್ನರಾಯಪಟ್ಟಣ ಯೋಜನಾ ಪ್ರಾಧಿಕಾರದ ಒಡೆತನದಲ್ಲಿರುವ ಅಮಾನಿಕೆರೆ ಗ್ರಾಮದ ಸ.ನಂ.152/1, 2, 3, 4, 151/1 ಮತ್ತು 153/2 ರ ವಿನ್ಯಾಸದಲ್ಲಿ ಕಾಯ್ದಿರಿಸಿದ ಸಿ.ಎ.ನಿವೇಶನದ ಕ್ಷೇತ್ರ 799ಚ.ಮೀ ಪೈಕಿ 210ಚ.ಮೀ ವಿಸ್ತೀರ್ಣವುಳ್ಳ ನಾಗರೀಕ ಸೌಲಭ್ಯ ನಿವೇಶನವನ್ನು ಕಾಂಗ್ರೆಸ್ ಭವನ ಕಟ್ಟಡ ನಿರ್ಮಾಣ ಮಾಡಲು ಕಾಂಗ್ರೆಸ್ ಭವನ ಟ್ರಸ್ಟ್(ರಿ), ಬೆಂಗಳೂರು ಇವರಿಗೆ KTCP(Allotment of Civic Amenity Sites) Rules, 2016 ರಡಿ ರಾಜಕೀಯ ಪಕ್ಷಗಳ ಭವನಗಳಿಗೆ ನಾಗರೀಕ ಸೌಲಭ್ಯ ನಿವೇಶನವನ್ನು ಉಚಿತವಾಗಿ ಹಂಚಿಕೆ ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಆದರೆ, ಸಚಿವ ಸಂಪುಟವು ವಿಷಯ ಸಂಖ್ಯೆ:ಸಿ.801/2025, ದಿನಾಂಕ:25.09.2025 ರಲ್ಲಿ "ಚರ್ಚೆಯ ನಂತರ, ಸದರಿ ನಿವೇಶನದ ಮಾರುಕಟ್ಟೆ ಮೌಲ್ಯದ ಶೇಕಡಾ 5ರಷ್ಟನ್ನು ವಿಧಿಸಿ, ಖಾಯಂ ಆಗಿ ಮಂಜೂರು ಮಾಡುವ ಮಾರ್ಪಾಡಿನೊಂದಿಗೆ" ಸಚಿವ ಸಂಪುಟ ಟಿಪ್ಪಣಿಯ ಕಂಡಿಕೆ 7(ಅ) ಒಳಗೊಂಡಿರುವ ಪ್ರಸ್ತಾವನೆಯನ್ನು ಸಚಿವ ಸಂಪುಟವು ಅನುಮೋದಿಸಿರುತ್ತದೆ.

ಅದರಂತೆ, ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ನಅಇ 361 ಮೈಅಪ್ರಾ 2025(ಇ),</u>**
**<u>ಬೆಂಗಳೂರು, ದಿನಾಂಕ:08.10.2025.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಚನ್ನರಾಯಪಟ್ಟಣ ಅಮಾನಿಕೆರೆ ಗ್ರಾಮದ ಸ.ನಂ.152/1, 2, 3, 4, 151/1 ಮತ್ತು 153/2 ರ ವಿನ್ಯಾಸದಲ್ಲಿ ಕಾಯ್ದಿರಿಸಿದ 210ಚ.ಮೀ ವಿಸ್ತೀರ್ಣವುಳ್ಳ ನಾಗರೀಕ ಸೌಲಭ್ಯ ನಿವೇಶನದ ಮಾರುಕಟ್ಟೆ ಮೌಲ್ಯದ ಶೇಕಡಾ 5ರಷ್ಟನ್ನು ವಿಧಿಸಿ, ಖಾಯಂ ಆಗಿ ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಕಛೇರಿ ಕಟ್ಟಡದ ನಿರ್ಮಾಣದ ಉದ್ದೇಶಕ್ಕಾಗಿ ಈ ಕೆಳಕಂಡ ಷರತ್ತಿಗೊಳಪಟ್ಟು ಮಂಜೂರು ಮಾಡಿ ಆದೇಶಿಸಿದೆ.

**ಷರತ್ತುಗಳು:**

1. ಸದರಿ ನಾಗರೀಕ ಸೌಲಭ್ಯ ನಿವೇಶನವನ್ನು ಚನ್ನರಾಯಪಟ್ಟಣದಲ್ಲಿ ಕಛೇರಿ ಕಟ್ಟಡದ ನಿರ್ಮಾಣದ ಉದ್ದೇಶಕ್ಕೆ ಹಂಚಿಕೆ ಮಾಡಿದ್ದು, ಅದನ್ನು ಹೊರತುಪಡಿಸಿ, ಬೇರೆ ಯಾವುದೇ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.
2. ಸದರಿ ನಾಗರೀಕ ಸೌಲಭ್ಯ ನಿವೇಶನವನ್ನು ಯಾವುದೇ ಸಂದರ್ಭದಲ್ಲಿ ಬೇರೆ ಯಾರಿಗೂ ಮಾರಾಟ ಮಾಡುವಂತಿಲ್ಲ ಅಥವಾ ಗುತ್ತಿಗೆಗೆ ನೀಡುವಂತಿಲ್ಲ.
3. ಸದರಿ ನಾಗರೀಕ ಸೌಲಭ್ಯ ನಿವೇಶನವನ್ನು ಪಡೆದ ಸಂಸ್ಥೆಯು ಮೇಲಿನ ಷರತ್ತುಗಳನ್ನು ಪಾಲಿಸಲು ವಿಫಲವಾದಲ್ಲಿ ಯಾವುದೇ ಪರಿಹಾರ ನೀಡದೇ ಸದರಿ ಜಾಗದಲ್ಲಿರುವ ಕಟ್ಟಡಗಳ ಸಹಿತ ವಶಕ್ಕೆ ಪಡೆಯಲು ಚನ್ನರಾಯಪಟ್ಟಣ ಯೋಜನಾ ಪ್ರಾಧಿಕಾರವು ಸಂಪೂರ್ಣ ಹಕ್ಕು ಹೊಂದಿರುತ್ತದೆ.
4. ಚನ್ನರಾಯಪಟ್ಟಣ ಯೋಜನಾ ಪ್ರಾಧಿಕಾರದ ವತಿಯಿಂದ ಕಛೇರಿ ಕಟ್ಟಡದ ನಿರ್ಮಿಸಲು ಯಾವುದೇ ಅನುದಾನ ನೀಡತಕ್ಕದ್ದಲ್ಲ.

...3

ಈ ಆದೇಶವನ್ನು ಸಚಿವ ಸಂಪುಟವು ಪ್ರಕರಣ ಸಂಖ್ಯೆ:ಸಿ.801/2025, ದಿನಾಂಕ:25.09.2025 ರಂದು ನೀಡಿರುವ ಅನುಮೋದನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

08/10/25
(ಲತಾ.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ.

**ಇವರಿಗೆ:**

1. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ, ಬೆಂಗಳೂರು.
2. ಜಿಲ್ಲಾಧಿಕಾರಿ, ಹಾಸನ ಜಿಲ್ಲೆ, ಹಾಸನ.
3. ಸದಸ್ಯ ಕಾರ್ಯದರ್ಶಿ, ಚನ್ನರಾಯಪಟ್ಟಣ ಯೋಜನಾ ಪ್ರಾಧಿಕಾರ, ಚನ್ನರಾಯಪಟ್ಟಣ, ಹಾಸನ ಜಿಲ್ಲೆ.
4. ಕಾಂಗ್ರೆಸ್ ಭವನ ಟ್ರಸ್ಟ್(ರಿ), ಇಂದಿರಾ ಗಾಂಧಿ ಭವನ್ ನಂ.12, ಜಸ್ಮ ಭವನ್ ರೋಡ್ ಬೆಂಗಳೂರು-560052.
5. ಸರ್ಕಾರದ ಅಪರ ಕಾರ್ಯದರ್ಶಿ, ಸಚಿವ ಸಂಪುಟ**(ಪ್ರಕರಣ ಸಂಖ್ಯೆ: ಸಿ: 801/2025)**, ವಿಧಾನಸೌಧ, ಬೆಂಗಳೂರು.
6. ಮಾನ್ಯ ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
7. ಸಂಬಂಧಪಟ್ಟವರಿಗೆ – ಸದಸ್ಯ ಕಾರ್ಯದರ್ಶಿ, ಚನ್ನರಾಯಪಟ್ಟಣ ಯೋಜನಾ ಪ್ರಾಧಿಕಾರ, ಚನ್ನರಾಯಪಟ್ಟಣ ರವರ ಮುಖಾಂತರ.
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬಾದಾಮಿ ಪಟ್ಟಣದ ರಿ.ಸ.ನಂ: 332/1+2ಬ/1ರ ವಿನ್ಯಾಸದಲ್ಲಿನ ಕ್ಷೇತ್ರ:613.00ಚಮೀ ವಿಸ್ತೀರ್ಣವುಳ್ಳ ನಾಗರಿಕ ಸೌಲಭ್ಯ ನಿವೇಶನವನ್ನು ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಬಾದಾಮಿ ಪಟ್ಟಣದಲ್ಲಿ ಕಾಂಗ್ರೆಸ್ ಭವನ ಕಟ್ಟಡ ನಿರ್ಮಾಣ ಉದೇಶಕ್ಕಾಗಿ ಹಂಚಿಕೆ ಮಾಡುವ ಹಾಗೂ ಸದರಿ ನಿವೇಶನದ ಬಾಕಿ ಮೊತ್ತಕ್ಕೆ ವಿನಾಯಿತಿ ನೀಡುವ ಬಗ್ಗೆ.

**ಓದಲಾಗಿದೆ:**
1. ಮಾನ್ಯ ಶಾಸಕರು, ಬಾದಾಮಿ ಕ್ಷೇತ್ರ ಇವರ ಪತ್ರ ಸಂಖ್ಯೆ: ಶಾ.ಸ.ಕ.ಸಂಖ್ಯೆ:577/2025-26, ದಿನಾಂಕ:21.06.2025
2. ಸದಸ್ಯ ಕಾರ್ಯದರ್ಶಿ, ನಗರ ಯೋಜನಾ ಪ್ರಾಧಿಕಾರ, ಬಾದಾಮಿ ಇವರ ಪತ್ರ ಸಂಖ್ಯೆ: ನಯೋಪ್ರಾಬಾ / ಮಾಹಿತಿ / 2025-26 / 128, ದಿನಾಂಕ:05.07.2025

*******

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಮಾನ್ಯ ಶಾಸಕರು, ವಿಧಾನಸಭೆ ಬಾದಾಮಿ ರವರು ಬಾದಾಮಿ ಪಟ್ಟಣದಲ್ಲಿ ಕಾಂಗ್ರೆಸ್ ಪಕ್ಷದ ಭವನ ನಿರ್ಮಿಸಲು ಬಾದಾಮಿ ನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಬಾದಾಮಿ ಪಟ್ಟಣದ ರಿ.ಸ.ನಂ: 332/1+2ಬ/1ರ ವಿನ್ಯಾಸದಲ್ಲಿನ (ಕ್ಷೇತ್ರ:613.00ಚಮೀ) ನಾಗರಿಕ ಸೌಲಭ್ಯ ನಿವೇಶನವನ್ನು ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಬಾದಾಮಿ ಪಟ್ಟಣದಲ್ಲಿ ಕಾಂಗ್ರೆಸ್ ಭವನ ಕಟ್ಟಡ ನಿರ್ಮಾಣ ಉದೇಶಕ್ಕಾಗಿ ಹಂಚಿಕೆ ಮಾಡುವ ಹಾಗೂ ಸದರಿ ನಿವೇಶನದ ಬಾಕಿ ಮೊತ್ತಕ್ಕೆ ವಿನಾಯಿತಿ ನೀಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಬಾದಾಮಿ ಪಟ್ಟಣದ ರಿ.ಸ.ನಂ:332/1+2ಬ/1ರ ವಿನ್ಯಾಸದಲ್ಲಿನ ನಾಗರಿಕ ಸೌಲಭ್ಯ ನಿವೇಶನವನ್ನು (ಕ್ಷೇತ್ರ:613.00 ಚ.ಮೀ) ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ, ಬಾದಾಮಿ ಬ್ಲಾಕ್‌ಗೆ ಕಾಂಗ್ರೆಸ್ ಭವನ ನಿರ್ಮಿಸಲು ನಿವೇಶನ ಹಂಚಿಕೆ ಮಾಡುವಂತೆ ಕೋರಿ ಮಾನ್ಯ ಶಾಸಕರು, ಬಾದಾಮಿ ಮತಕ್ಷೇತ್ರ ಇವರು ಮನವಿ ಸಲ್ಲಿಸಿರುತ್ತಾರೆ ಹಾಗೂ ಪ್ರಾಧಿಕಾರದಿಂದ ನಿಗಧಿಪಡಿಸಿದ ನಿವೇಶನದ ಒಟ್ಟು ಮೊತ್ತ ರೂ.24,52,000/- ಗಳ ಪೈಕಿ ಶೇ:10% ಠೇವಣಿ ಮೊತ್ತ ರೂ.2,45,200/- ಗಳನ್ನು ಡಿ.ಡಿ. ಮೂಲಕ ಅರ್ಜಿಯೊಂದಿಗೆ ಸಲ್ಲಿಸಿರುತ್ತಾರೆ. ಆದರೆ, ಪ್ರಸ್ತಾಪಿತ ನಾಗರಿಕ ಸೌಲಭ್ಯ ನಿವೇಶನವನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/27/ಟಿಟಿಪಿ/2016 ದಿನಾಂಕ:24.05.2017ರ ಯೋಜನಾ ಪ್ರಾಧಿಕಾರಗಳ ನಾಗರಿಕ ಸೌಲಭ್ಯ ನಿವೇಶನ ಹಂಚಿಕೆ ನಿಯಮಗಳಲ್ಲಿ ರಾಜಕೀಯ ಪಕ್ಷಗಳಿಗೆ ಹಂಚಿಕೆ ಮಾಡಲು ಅವಕಾಶವಿಲ್ಲವೆಂದು ಹಿಂಬರಹ ನೀಡಿರುವುದಾಗಿ ಸದಸ್ಯ ಕಾರ್ಯದರ್ಶಿಗಳು, ನಗರ ಯೋಜನಾ ಪ್ರಾಧಿಕಾರ ಬಾದಾಮಿ ರವರು ಸರ್ಕಾರಕ್ಕೆ ವರದಿ ಮಾಡಿರುತ್ತಾರೆ.

ಬಾದಾಮಿ ನಗರ ಯೋಜನಾ ಪ್ರಾಧಿಕಾರದಿಂದ ಬಾದಾಮಿ ಪಟ್ಟಣದ ರಿ.ಸ.ನಂ: 332/1+2ಬ/1ರ ವಿನ್ಯಾಸದಲ್ಲಿನ ಕ್ಷೇತ್ರ:613.00ಚಮೀ ವಿಸ್ತೀರ್ಣವುಳ್ಳ ನಾಗರಿಕ ಸೌಲಭ್ಯ ನಿವೇಶನವನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ, ಬಾದಾಮಿ ಬ್ಲಾಕ್‌ಗೆ ಕಾಂಗ್ರೆಸ್ ಭವನ ನಿರ್ಮಿಸಲು, ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ The Karnataka Planning Authorities (Allotment of Civic Amenity Sites) Rules 2016 ರ ನಿಯಮ 2(c) ರಡಿ ರಾಜಕೀಯ ಪಕ್ಷಗಳ ಭವನಗಳಿಗೆ ಉಚಿತವಾಗಿ ಹಂಚಿಕೆ ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಆದರೆ, ಸಚಿವ ಸಂಪುಟವು ವಿಷಯ ಸಂಖ್ಯೆ: ಸಿ 688/2025, ದಿನಾಂಕ:04.09.2025 ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ, ಬಾದಾಮಿ ಬ್ಲಾಕ್‌ಗೆ ಕಾಂಗ್ರೆಸ್ ಭವನ ನಿರ್ಮಿಸಲು ಬಾದಾಮಿ ಪಟ್ಟಣದ ರಿ.ಸ.ನಂ. 332/1 + 2ಬ/1ರ ವಿನ್ಯಾಸದಲ್ಲಿನ ನಾಗರಿಕ ಸೌಲಭ್ಯ ನಿವೇಶನವನ್ನು (ಕ್ಷೇತ್ರ 613.00 ಚ.ಮೀ) ಕಾಂಗ್ರೆಸ್ ಭವನ ಟ್ರಸ್ಟ್ (ರಿ)., ಬೆಂಗಳೂರು ಇವರಿಗೆ ಕಛೇರಿ ಕಟ್ಟಡದ ನಿರ್ಮಾಣದ ಉದ್ದೇಶಕ್ಕಾಗಿ, ಸದರಿ ನಿವೇಶನಕ್ಕೆ ಹಂಚಿಕೆ ಮೌಲ್ಯದ ಶೇಕಡಾ 10ರಷ್ಟನ್ನು ವಿಧಿಸಲು ಹಾಗೂ ಬಾಕಿ ಮೊತ್ತ ಪಾವತಿಸುವುದರಿಂದ ವಿನಾಯಿತಿ ನೀಡಲು ತೀರ್ಮಾನಿಸಿರುತ್ತದೆ.

ಅದರಂತೆ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 205 ಬೆಮಪ್ರಾ 2025 (ಇ),**
**ಬೆಂಗಳೂರು, ದಿನಾಂಕ: 15.09.2025.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ, ಬಾದಾಮಿ ಬ್ಲಾಕ್‌ಗೆ ಕಾಂಗ್ರೆಸ್ ಭವನ ನಿರ್ಮಿಸಲು ಬಾದಾಮಿ ಪಟ್ಟಣದ ರಿ.ಸ.ನಂ. 332/1 + 2ಬ/1ರ ವಿನ್ಯಾಸದಲ್ಲಿನ ನಾಗರಿಕ ಸೌಲಭ್ಯ ನಿವೇಶನವನ್ನು (ಕ್ಷೇತ್ರ 613.00 ಚ.ಮೀ) ಕಾಂಗ್ರೆಸ್ ಭವನ ಟ್ರಸ್ಟ್ (ರಿ)., ಬೆಂಗಳೂರು ಇವರಿಗೆ ಕಛೇರಿ ಕಟ್ಟಡದ ನಿರ್ಮಾಣದ ಉದ್ದೇಶಕ್ಕಾಗಿ, ಸದರಿ ನಿವೇಶನಕ್ಕೆ ಹಂಚಿಕೆ ಮೌಲ್ಯದ ಶೇಕಡಾ 10ರಷ್ಟನ್ನು ವಿಧಿಸಲು ಹಾಗೂ ಬಾಕಿ ಮೊತ್ತ ಪಾವತಿಸುವುದರಿಂದ ಈ ಕೆಳಕಂಡ ಷರತ್ತಿಗೊಳಪಟ್ಟು ವಿನಾಯಿತಿ ನೀಡಿ ಆದೇಶಿಸಿದೆ.

**ಷರತ್ತುಗಳು:**

1. ಸದರಿ ಜಾಗವನ್ನು ಬಾದಾಮಿ ಪಟ್ಟಣದಲ್ಲಿ ಕಛೇರಿ ಕಟ್ಟಡದ ನಿರ್ಮಾಣದ ಉದ್ದೇಶಕ್ಕೆ ಹಂಚಿಕೆ ಮಾಡಿದ್ದು, ಅದನ್ನು ಹೊರತುಪಡಿಸಿ, ಬೇರೆ ಯಾವುದೇ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.
2. ಈ ಜಾಗವನ್ನು ಯಾವುದೇ ಸಂದರ್ಭದಲ್ಲಿ ಬೇರೆ ಯಾರಿಗೂ ಮಾರಾಟ ಮಾಡುವಂತಿಲ್ಲ ಅಥವಾ ಗುತ್ತಿಗೆಗೆ ನೀಡುವಂತಿಲ್ಲ.
3. ಈ ಜಾಗವನ್ನು ಪಡೆದ ಸಂಸ್ಥೆಯು ಮೇಲಿನ ಷರತ್ತುಗಳನ್ನು ಪಾಲಿಸಲು ವಿಫಲವಾದಲ್ಲಿ ಯಾವುದೇ ಪರಿಹಾರ ನೀಡದೇ ಸದರಿ ಜಾಗದಲ್ಲಿರುವ ಕಟ್ಟಡಗಳ ಸಹಿತ ವಶಕ್ಕೆ ಪಡೆಯಲು ಬಾದಾಮಿ ನಗರ ಯೋಜನಾ ಪ್ರಾಧಿಕಾರವು ಸಂಪೂರ್ಣ ಹಕ್ಕು ಹೊಂದಿರುತ್ತದೆ.
4. ಬಾದಾಮಿ ನಗರ ಯೋಜನಾ ಪ್ರಾಧಿಕಾರದ ವತಿಯಿಂದ ಕಛೇರಿ ಕಟ್ಟಡದ ನಿರ್ಮಿಸಲು ಯಾವುದೇ ಅನುದಾನ ನೀಡತಕ್ಕದ್ದಲ್ಲ.

ಈ ಆದೇಶವನ್ನು ಸಚಿವ ಸಂಪುಟವು ಪ್ರಕರಣ ಸಂಖ್ಯೆ: ಸಿ 688/2025, ದಿನಾಂಕ:04.09.2025 ರಂದು ನೀಡಿರುವ ಅನುಮೋದನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

15/09/25
(ಲತಾ.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ

**ಇವರಿಗೆ:**

1. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ, ಬೆಂಗಳೂರು.

2. ಜಿಲ್ಲಾಧಿಕಾರಿ, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ.
3. ಸದಸ್ಯ ಕಾರ್ಯದರ್ಶಿ, ನಗರ ಯೋಜನಾ ಪ್ರಾಧಿಕಾರ, ಬಾದಾಮಿ.
4. ಕಾಂಗ್ರೆಸ್ ಭವನ ಟ್ರಸ್ಟ್ (ರಿ.), ಇಂದಿರಾ ಗಾಂಧಿ ಭವನ್ ನಂ.12, ಜಸ್ಮ ಭವನ್ ರೋಡ್ ಬೆಂಗಳೂರು-560052
5. ಸರ್ಕಾರದ ಅಪರ ಕಾರ್ಯದರ್ಶಿ, ಸಚಿವ ಸಂಪುಟ **(ಪ್ರಕರಣ ಸಂಖ್ಯೆ: ಸಿ: 688/2025, ದಿನಾಂಕ:04.09.2025)**, ವಿಧಾನಸೌಧ, ಬೆಂಗಳೂರು.
6. ಮಾನ್ಯ ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
7. ಸಂಬಂಧಪಟ್ಟವರಿಗೆ – ಸದಸ್ಯ ಕಾರ್ಯದರ್ಶಿ, ನಗರ ಯೋಜನಾ ಪ್ರಾಧಿಕಾರ, ಬಾದಾಮಿ ರವರ ಮುಖಾಂತರ.
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ವಿವಿಧ ನಗರ ಯೋಜನಾ ಪ್ರಾಧಿಕಾರಗಳು / ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಲಭ್ಯವಿರುವ ನಿವೇಶನಗಳನ್ನು ಬ್ಲಾಕ್ ಕಾಂಗ್ರೆಸ್ ಕಛೇರಿ ನಿರ್ಮಾಣ ಮಾಡುವ ಸಲುವಾಗಿ ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ:
1. ಅಧ್ಯಕ್ಷರು, ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರ ಮನವಿಗಳು.
2. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರ ಪತ್ರ ಸಂಖ್ಯೆಗಳು:1564396 / DMA / DEV / OTH / 251 / 2024, ದಿನಾಂಕ:20.11.2025, 1564396 / DMA / DEV / OTH / 251 / 2024, ದಿನಾಂಕ:24.11.2025, 1834593 / DMA / DEV / OTH / 95 / 2025, ದಿನಾಂಕ:08.08.2025, 1952933 / DMA / DEV / OTH / 152 / 2025, ದಿನಾಂಕ:11.11.2025.
3. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ ರವರ ಪತ್ರ ಸಂಖ್ಯೆಗಳು: DTCP-TECH0MISC / 579 / 2025 (E-1949719), DTCP-TECH0MISC/273/2025-(E-794566)

*******

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಅಧ್ಯಕ್ಷರುಗಳು, ಜಿಲ್ಲಾ ಕಾಂಗ್ರೆಸ್ ಸಮಿತಿ ರವರು ವಿವಿಧ ನಗರ ಯೋಜನಾ ಪ್ರಾಧಿಕಾರಗಳು / ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಲಭ್ಯವಿರುವ ನಿವೇಶನಗಳನ್ನು ಬ್ಲಾಕ್ ಕಾಂಗ್ರೆಸ್ ಕಛೇರಿ ನಿರ್ಮಾಣ ಮಾಡುವ ಸಲುವಾಗಿ ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಮಂಜೂರು ಮಾಡುವಂತೆ ಕೋರಿರುತ್ತಾರೆ.

a. ಕಲಬುರಗಿ ಜಿಲ್ಲೆಯ ಅಫಜಲಪೂರ ಪುರಸಭೆ ವ್ಯಾಪ್ತಿಯಲ್ಲಿ ಇರುವ ಸರ್ವೆ ನಂ.354/12ರಲ್ಲಿರುವ 1120.63 ಚ.ಮೀ ವಿಸ್ತೀರ್ಣವುಳ್ಳ ಸಿ.ಎ ನಿವೇಶನವನ್ನು ಕಾಂಗ್ರೆಸ್ ಭವನ ಕಟ್ಟಡ ನಿರ್ಮಾಣಕ್ಕಾಗಿ ನೀಡುವಂತೆ ಕೋರಿರುವ ಕುರಿತು.

b. ದೇವನಹಳ್ಳಿ ಪುರಸಭೆ ವ್ಯಾಪ್ತಿಯ ವಾರ್ಡ್ ನಂ:10ರ ಅಜ್ಮಲ್ ಬಡಾವಣೆಯ ಸಿ ಎ ನಿವೇಶನ ಆಸ್ತಿ ಸಂಖ್ಯೆ:3224/49/2/51/52/2 ರ 6841.97 ಚ.ಮೀ. ವಿಸ್ತೀರ್ಣವುಳ್ಳ ನಾಗರಿಕ ಸೌಲಭ್ಯ ನಿವೇಶನವನ್ನು ಕಾಂಗ್ರೆಸ್ ಭವನ ಟ್ರಸ್ಟ್(ರಿ) ದೇವನಹಳ್ಳಿ ರವರಿಗೆ ಮಂಜೂರು ಮಾಡಲು ಕೋರಿರುವ ಕುರಿತು.

c. ಕಾಳಗಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಸರ್ವೆ ನಂ.230/3ರಲ್ಲಿರುವ ವಿಸ್ತೀರ್ಣ 614.92 ಚ.ಮೀ ಸಿ.ಎ ನಿವೇಶನವನ್ನು ಕಾಂಗ್ರೆಸ್ ಭವನ ಕಟ್ಟಡ ನಿರ್ಮಾಣಕ್ಕಾಗಿ ನೀಡುವಂತೆ ಕೋರಿರುವ ಕುರಿತು.

d. ಚಿಂಚೋಳಿ ಪುರಸಭೆ ವ್ಯಾಪ್ತಿಯಲ್ಲಿ ಬರುವ ಸರ್ವೆ ನಂ.143/2ರಲ್ಲಿರುವ ವಿಸ್ತೀರ್ಣ 1086.50 ಚ.ಮೀ ಸಿ.ಎ ನಿವೇಶನವನ್ನು ಕಾಂಗ್ರೇಸ್ ಭವನ ಕಟ್ಟಡ ನಿರ್ಮಾಣಕ್ಕಾಗಿ ನೀಡುವಂತೆ ಕೋರಿರುವ ಕುರಿತು.

e. ಲಿಂಗಸಗೂರು ಯೋಜನಾ ಪ್ರಾಧಿಕಾರದ ಒಡೆತನದಲ್ಲಿರುವ ರಾಯಚೂರು ಜಿಲ್ಲೆ, ಲಿಂಗಸೂರು ತಾಲ್ಲೂಕಿನ ಹುಲಿಗುಡ್ಡ ಗ್ರಾಮದ ಸ ನಂ 13/*/8 ರಲ್ಲಿ ಕ್ಷೇತ್ರ : 5 ಎ -00 ಗುಂಟೆ ವಿಸ್ತೀರ್ಣದ ಜಮೀನಿನ ಕಾಯ್ದಿರಿಸಿದ ವಿನ್ಯಾಸದಲ್ಲಿ ಒಟ್ಟು 1068.00 ಚ.ಮೀ. ವಿಸ್ತೀರ್ಣದ ನಾಗರೀಕ ಸೌಲಭ್ಯ ನಿವೇಶನವನ್ನು ಕಾಂಗ್ರೆಸ್ ಕಛೇರಿ ಕಟ್ಟಡ ನಿರ್ಮಾಣಕ್ಕಾಗಿ ಮಂಜೂರು ಮಾಡಲು ಕೋರಿರುವ ಕುರಿತು.

f. ಬಸವಕಲ್ಯಾಣ ನಗರ ಯೋಜನಾ ಪ್ರಾಧಿಕಾರದ ಒಡೆತನದಲ್ಲಿರುವ ಬೀದರ ಜಿಲ್ಲ, ಬಸವಕಲ್ಯಾಣ ತಾಲ್ಲೂಕಿನ ತ್ರಿಪೂರಾಂತ ಗ್ರಾಮದ ಸ.ನಂ. 267/1 & 267/2 ರಲ್ಲಿರುವ 707.47 ಚ.ಮೀ. ವಿಸ್ತೀರ್ಣದ ನಾಗರಿಕ ಸೌಲಭ್ಯದ ನಿವೇಶನವನ್ನು ಕಾಂಗ್ರೇಸ್ ಭವನ ಟ್ರಸ್ಟ್ ಬೆಂಗಳೂರು ಇವರಿಗೆ ಕಾಂಗ್ರೇಸ್ ಕಛೇರಿ ಕಟ್ಟಡ ನಿರ್ಮಾಣಕ್ಕಾಗಿ ಮಂಜೂರು ಮಾಡಲು ಕೋರಿರುವ ಕುರಿತು.

ಮೇಲೆ ಓದಲಾದ ಉಲ್ಲೇಖ (2) ರ ಪತ್ರಗಳಲ್ಲಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಪ್ರಶ್ನಿತ ಜಾಗವನ್ನು ಅಥವಾ ನಿವೇಶನಗಳನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 129 ಟಿಎಂಡಿ 2002, ದಿನಾಂಕ: 02.06.2003ರ ಮಾರ್ಗಸೂಚಿಯಂತೆ ಹಾಗೂ ಅಧಿಸೂಚನೆ ಸಂಖ್ಯೆ: ನಅಇ 27 ಟಿಟಿಪಿ 2017, ದಿನಾಂಕ: 24.05.2017ರಲ್ಲಿನ ಮಾರ್ಗಸೂಚಿಗಳಂತೆ ಬ್ಲಾಕ್ ಕಾಂಗ್ರೇಸ್ ಸಮಿತಿ ಕಟ್ಟಡ ನಿರ್ಮಾಣಕ್ಕೆ ಮಂಜೂರು ಮಾಡಲು ಅವಕಾಶವಿರುವುದಿಲ್ಲ. ಮುಂದುವರೆದು, ನಾಗರೀಕ ಸೌಲಭ್ಯಕ್ಕೆ ಮೀಸಲಿರಿಸಲಾದ ನಿವೇಶನಗಳನ್ನು Karnataka Planning Authorities (Allotment of Civic amenity sites) Rules, 2016ರನ್ವಯ ಗುತ್ತಿಗೆ ಮೂಲಕ ಹಂಚಿಕೆ ಮಾಡಲು ಅವಕಾಶವಿರುತ್ತದೆ. ನಾಗರೀಕ ಸೌಲಭ್ಯಕ್ಕೆ ಮೀಸಲಿರಿಸಲಾದ ನಿವೇಶನಗಳ ಮಂಜೂರಾತಿಗೆ ಅವಕಾಶವಿರುವುದಿಲ್ಲ ಎಂದು ರವರು ತಿಳಿಸಿರುತ್ತಾರೆ.

ಮೇಲೆ ಓದಲಾದ ಉಲ್ಲೇಖ (3) ರ ಪತ್ರಗಳಲ್ಲಿ ಕರ್ನಾಟಕ ಯೋಜನಾ ಪ್ರಾಧಿಕಾರಗಳ (ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆ) ನಿಯಮಗಳು 2016 ರಲ್ಲಿ Institution ಪರಿಭಾಷೆ ನೀಡಲಾಗಿದ್ದು, ಅದರನ್ವಯ ನಾಗರೀಕ ಸೌಲಭ್ಯ ನಿವೇಶನವನ್ನು ಯಾವುದೇ ಸಂಸ್ಥೆಗೆ ಹಂಚಿಕೆ ಮಾಡಬೇಕಾದಲ್ಲಿ ಪ್ರಾಧಿಕಾರವು KTCP (ಸಿ.ಎ.ನಿವೇಶನ ಹಂಚಿಕೆ) ನಿಯಮಗಳ "civic amenity" ರಡಿಯಲ್ಲಿ ನಮೂದಿಸಿರುವ ಉದ್ದೇಶಗಳಿಗೆ ಮಾತ್ರ ಹಂಚಿಕೆ ಮಾಡಲು ಅವಕಾಶವಿರುತ್ತದೆ. ಆದರೆ, ರಾಜಕೀಯ ಪಕ್ಷಗಳ ಭವನಗಳಿಗೆ ನಾಗರೀಕ ಸೌಲಭ್ಯ ನಿವೇಶನವನ್ನು ಹಂಚಿಕೆ ಮಾಡಲು ಸದರಿ ನಿಯಮಗಳಲ್ಲಿ ಹಾಗೂ **ದಿನಾಂಕ: 24-05-2017 ರ ಅಧಿಸೂಚನೆ ಸಂಖ್ಯೆ: ನಅಇ 27 ಟಿಟಿಪಿ 2016** ರನ್ವಯ ಅವಕಾಶವಿರುವುದಿಲ್ಲ, ಎಂದು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ ರವರು ತಿಳಿಸಿರುತ್ತಾರೆ.

ಆದರೆ, ಸಚಿವ ಸಂಪುಟವು ವಿಷಯ ಸಂಖ್ಯೆ: ಸಿ 03/2026, ದಿನಾಂಕ:02.01.2026ರಲ್ಲಿ 06 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ನಾಗರಿಕ ಸೌಲಭ್ಯ ನಿವೇಶನಗಳನ್ನು ಬ್ಲಾಕ್ ಕಾಂಗ್ರೆಸ್ ಕಛೇರಿ ನಿರ್ಮಾಣ ಮಾಡುವ ಸಲುವಾಗಿ "ಕಾಂಗ್ರೆಸ್ ಭವನ ಟ್ರಸ್ಟ್ (ರಿ)., ಬೆಂಗಳೂರು" ಇವರಿಗೆ ಸದರಿ ನಿವೇಶನ ಮೌಲ್ಯದ ಶೇಕಡಾ 5ರಷ್ಟನ್ನು ವಿಧಿಸಿ, ಖಾಯಂ ಆಗಿ ಮಂಜೂರು ಮಾಡಲು ತೀರ್ಮಾನಿಸಿರುತ್ತದೆ.

ಅದರಂತೆ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ನಅಇ 36 ಟಿಎಂಡಿ 2025 (ಇ),**
**ಬೆಂಗಳೂರು, ದಿನಾಂಕ: 13.01.2026**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ನಗರ ಸ್ಥಳೀಯ ಸಂಸ್ಥೆಗಳ / ವಿವಿಧ ನಗರ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿನ ಈ ಕೆಳಕಂಡ ಆರು ನಾಗರಿಕ ಸೌಲಭ್ಯ ನಿವೇಶನಗಳನ್ನು ಬ್ಲಾಕ್ ಕಾಂಗ್ರೆಸ್ ಕಛೇರಿ ನಿರ್ಮಾಣ ಮಾಡುವ ಸಲುವಾಗಿ "ಕಾಂಗ್ರೆಸ್ ಭವನ ಟ್ರಸ್ಟ್ (ರಿ), ಬೆಂಗಳೂರು" ಇವರಿಗೆ ಸದರಿ ನಿವೇಶನ ಮೌಲ್ಯದ ಶೇಕಡಾ 5ರಷ್ಟನ್ನು ವಿಧಿಸಿ, ಖಾಯಂ ಆಗಿ ಮಂಜೂರು ಮಾಡಿದೆ



UDD-TDS-CMSC-???-2025-DOB-DTCP-DEPARTMENT OF TOWN AND COUNTRY PLANNING (Computer No. 1794566)

a. ಕಲಬುರಗಿ ಜಿಲ್ಲೆಯ ಅಫಜಲಪೂರ ಪುರಸಭೆ ವ್ಯಾಪ್ತಿಯಲ್ಲಿ ಇರುವ ಸರ್ವೆ ನಂ.354/12ರಲ್ಲಿರುವ 1120.63 ಚ.ಮೀ ವಿಸ್ತೀರ್ಣವುಳ್ಳ ನಾಗರಿಕ ಸೌಲಭ್ಯ ನಿವೇಶನ.

b. ದೇವನಹಳ್ಳಿ ಪುರಸಭೆ ವ್ಯಾಪ್ತಿಯ ವಾರ್ಡ್ ನಂ:10ರ ಅಜ್ಜಲ್ ಬಡಾವಣೆಯ ಸಿ ಎ ನಿವೇಶನ ಆಸ್ತಿ ಸಂಖ್ಯೆ:3224/49/2/51/52/2 ರ 6841.97 ಚ.ಮೀ. ವಿಸ್ತೀರ್ಣವುಳ್ಳ ನಾಗರಿಕ ಸೌಲಭ್ಯ ನಿವೇಶನ.

c. ಕಾಳಗಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಸರ್ವೆ ನಂ.230/3ರಲ್ಲಿರುವ ವಿಸ್ತೀರ್ಣ 614.92 ಚ.ಮೀ ನಾಗರಿಕ ಸೌಲಭ್ಯ ನಿವೇಶನ.

d. ಚಿಂಚೋಳಿ ಪುರಸಭೆ ವ್ಯಾಪ್ತಿಯಲ್ಲಿ ಬರುವ ಸರ್ವೆ ನಂ.143/2ರಲ್ಲಿರುವ ವಿಸ್ತೀರ್ಣ 1086.50 ಚ.ಮೀ ನಾಗರಿಕ ಸೌಲಭ್ಯ ನಿವೇಶನ.

e. ಲಿಂಗಸಗೂರು ಯೋಜನಾ ಪ್ರಾಧಿಕಾರದ ಒಡೆತನದಲ್ಲಿರುವ ರಾಯಚೂರು ಜಿಲ್ಲೆ, ಲಿಂಗಸೂರು ತಾಲ್ಲೂಕಿನ ಹುಲಿಗುಡ್ಡ ಗ್ರಾಮದ ಸ ನಂ 13/*/8 ರಲ್ಲಿ ಕ್ಷೇತ್ರ : 5 ಎ -00 ಗುಂಟೆ ವಿಸ್ತೀರ್ಣದ ಜಮೀನಿನ ಕಾಯ್ದಿರಿಸಿದ ವಿನ್ಯಾಸದಲ್ಲಿ ಒಟ್ಟು 1068.00 ಚ.ಮೀ. ವಿಸ್ತೀರ್ಣದ ನಾಗರೀಕ ಸೌಲಭ್ಯ ನಿವೇಶನ.

f. ಬಸವಕಲ್ಯಾಣ ನಗರ ಯೋಜನಾ ಪ್ರಾಧಿಕಾರದ ಒಡೆತನದಲ್ಲಿರುವ ಬೀದರ ಜಿಲ್ಲೆ, ಬಸವಕಲ್ಯಾಣ ತಾಲ್ಲೂಕಿನ ತ್ರಿಪೂರಾಂತ ಗ್ರಾಮದ ಸ.ನಂ. 267/1 & 267/2 ರಲ್ಲಿರುವ 707.47 ಚ.ಮೀ. ವಿಸ್ತೀರ್ಣದ ನಾಗರಿಕ ಸೌಲಭ್ಯದ ನಿವೇಶನ.

ಷರತ್ತುಗಳು:

1. ಸದರಿ ಜಾಗವನ್ನು ಕಛೇರಿ ಕಟ್ಟಡದ ನಿರ್ಮಾಣದ ಉದ್ದೇಶಕ್ಕೆ ಹಂಚಿಕೆ ಮಾಡಿದ್ದು, ಅದನ್ನು ಹೊರಗುತ್ತಿಗೆ ನೀಡಿ ಬೇರೆ ಯಾವುದೇ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.
2. ಈ ಜಾಗವನ್ನು ಯಾವುದೇ ಸಂದರ್ಭದಲ್ಲಿ ಬೇರೆ ಯಾರಿಗೂ ಮಾರಾಟ ಮಾಡುವಂತಿಲ್ಲ ಅಥವಾ ಗುತ್ತಿಗೆಗೆ ನೀಡುವಂತಿಲ್ಲ.
3. ಈ ಜಾಗವನ್ನು ಪಡೆದ ಸಂಸ್ಥೆಯು ಮೇಲಿನ ಷರತ್ತುಗಳನ್ನು ಪಾಲಿಸಲು ವಿಫಲವಾದಲ್ಲಿ ಯಾವುದೇ ಪರಿಹಾರ ನೀಡದೇ ಸದರಿ ಜಾಗದಲ್ಲಿರುವ ಕಟ್ಟಡಗಳ ಸಹಿತ ವಶಕ್ಕೆ ಪಡೆಯಲು ಆಯಾಯ ನಗರ ಯೋಜನಾ ಪ್ರಾಧಿಕಾರಗಳು / ನಗರ ಸ್ಥಳೀಯ ಸಂಸ್ಥೆಗಳು ಸಂಪೂರ್ಣ ಹಕ್ಕು ಹೊಂದಿರುತ್ತದೆ.
4. ನಗರ ಯೋಜನಾ ಪ್ರಾಧಿಕಾರಗಳು / ನಗರ ಸ್ಥಳೀಯ ಸಂಸ್ಥೆಗಳ ವತಿಯಿಂದ ಕಛೇರಿ ಕಟ್ಟಡ ನಿರ್ಮಿಸಲು ಯಾವುದೇ ಅನುದಾನ ನೀಡತಕ್ಕದ್ದಲ್ಲ.

ಈ ಆದೇಶವನ್ನು ಸಚಿವ ಸಂಪುಟವು ಪ್ರಕರಣ ಸಂಖ್ಯೆ: ಸಿ:03/2026, ದಿನಾಂಕ:02.01.2026 ರಂದು ನೀಡಿರುವ ಅನುಮೋದನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

13/1/2026

(ಮಹಾಂತಪ್ಪ ಎಸ್. ತುರಕನೂರ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

13/1

ಇವರಿಗೆ:

1. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ, ಬೆಂಗಳೂರು.
2. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ವಿವಿಗೋಪುರ, ಬೆಂಗಳೂರು.
3. ಜಿಲ್ಲಾಧಿಕಾರಿ, ಕಲಬುರಗಿ, ಬೆಂಗಳೂರು ಗ್ರಾಮಾಂತರ, ರಾಯಚೂರು, ಬೀದರ್ ಜಿಲ್ಲೆಗಳು.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ವಿವಿಧ ನಗರ ಯೋಜನಾ ಪ್ರಾಧಿಕಾರಗಳು / ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಲಭ್ಯವಿರುವ ನಿವೇಶನಗಳನ್ನು ಬ್ಲಾಕ್ ಕಾಂಗ್ರೆಸ್ ಕಛೇರಿ ನಿರ್ಮಾಣ ಮಾಡುವ ಸಲುವಾಗಿ ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಲೀಸ್ ಆಧಾರದ ಮೇಲೆ ಮಂಜೂರು ಮಾಡುವ ಬಗ್ಗೆ.

**ಓದಲಾಗಿದೆ:**
1. ಅಧ್ಯಕ್ಷರುಗಳು, ಜಿಲ್ಲಾ ಕಾಂಗ್ರೆಸ್ ಸಮಿತಿ, ಶಿವಮೊಗ್ಗ, ಆನವಟ್ಟಿ, ಹೊಳಲ್ಕೆರೆ, ಮಾನವಿ, ಹಾಗೂ ಟ್ರಸ್ಟೀ, ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು.
2. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರ ಪತ್ರ ಸಂಖ್ಯೆಗಳು: 1916422 / DMA / DEV / OTH / 144 / 2025, ದಿನಾಂಕ:18.09.2025, 1888185 / DMA / DEV / OTH / 121 / 2025, ದಿನಾಂಕ:18.09.2025, 1918965 / DMA / DEV / OTH / 145 / 2025, ದಿನಾಂಕ:22.09.2025 & 1920750 / DMA / DEV / OTH / 146 / 2025, ದಿನಾಂಕ:22.09.2025.
3. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ ರವರ ಪತ್ರ ಸಂಖ್ಯೆಗಳು: DTCP-TECH0MISC / 572 / 2025 (E-1946194), DTCP-TECH0MISC / 564 / 2025 (E-1945445) & DTCP-TECH0MISC/180/2025 (E-1748214).

*******

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ ಅಧ್ಯಕ್ಷರುಗಳು, ಜಿಲ್ಲಾ ಕಾಂಗ್ರೆಸ್ ಸಮಿತಿ ರವರುಗಳು ವಿವಿಧ ನಗರ ಯೋಜನಾ ಪ್ರಾಧಿಕಾರಗಳು / ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಲಭ್ಯವಿರುವ ನಿವೇಶನಗಳನ್ನು ಬ್ಲಾಕ್ ಕಾಂಗ್ರೆಸ್ ಕಛೇರಿ ನಿರ್ಮಾಣ ಮಾಡುವ ಸಲುವಾಗಿ ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಲೀಸ್ ಆಧಾರದ ಮೇಲೆ ಮಂಜೂರು ಮಾಡುವಂತೆ ಕೋರಿರುತ್ತಾರೆ.

a. ಶಿಕಾರಿಪುರ ಪುರಸಭೆ ವ್ಯಾಪ್ತಿಯ 15ನೇ ವಾರ್ಡಿನ ಹಳಿಯೂರು ಹೊಸಕೇರಿ ರಾಘವೇಂದ್ರ ಸ್ವಾಮಿ ಮಠದ ವ್ಯಾಪ್ತಿಯ ಶಿಕಾರಿಪುರ ಪುರಸಭೆ ಮಾಲೀಕತ್ವದ ಖಾತೆ ಸಂಖ್ಯೆ:243/243/225 ಸ್ವತ್ತಿನ ಅಳತೆ, (90+94)/2*(225+230)/2 ಮತ್ತು (78+87)/2*(197+230)/2 ಅಡಿಯಲ್ಲಿ ಅಳತೆ 40*60 ಅಡಿ ನಿವೇಶನವನ್ನು ಬಿಟ್ಟು ಉಳಿದ ಸಂಪೂರ್ಣ ಅಳತೆಯ ಜಾಗವನ್ನು ಕಾಂಗ್ರೆಸ್ ಭವನದ ಕಟ್ಟಡ ನಿರ್ಮಾಣ ಮಾಡಲು 30 ವರ್ಷದ ಅವಧಿಗೆ ಲೀಸ್ / ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲು.

b. ಅನವಟ್ಟಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಕೆ.ಎಂ.ಎಫ್ 24 ಸರ್ವೆ ನಂ. 8/16ರ ಕೃಷಿ ಜಮೀನು ಮಾನ್ಯ ಜಿಲ್ಲಾಧಿಕಾರಿಗಳಿಂದ ಭೂ ಪರಿವರ್ತನೆಗೊಂಡಿದ್ದು, ಸದರಿ ಜಾಗದಲ್ಲಿ ಮೀಸಲಿಟ್ಟಿರುವ ಸಾರ್ವಜನಿಕ ಜಾಗದ ಖಾತೆಯು ಹಾಲಿ ಪಟ್ಟಣ ಪಂಚಾಯಿತಿಯಲ್ಲಿ ದಾಖಲಿದ್ದು, ಸದರಿ ಜಾಗದಲ್ಲಿ 30.01+13.00=390.13 ಚದರ ಮೀಟರ್ ವಿಸ್ತೀರ್ಣದ ನಿವೇಶನವನ್ನು ಕಾಂಗ್ರೆಸ್ ಭವನದ ಕಟ್ಟಡ ನಿರ್ಮಾಣ ಮಾಡಲು ಮಂಜೂರು ಮಾಡಲು.

c. ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ಪುರಸಭೆ ವ್ಯಾಪ್ತಿಯಲ್ಲಿನ ಹೊಳಲ್ಕೆರೆ ಪುರಸಭೆ ಠಾಣೆಯ ಹಿಂಭಾಗದಲ್ಲಿರುವ ಖಾತಾ ಸಂಖ್ಯೆ: 213 ವಿಸ್ತೀರ್ಣ 80*90 ಅಡಿ ಅಳತೆಯ ಜಾಗವನ್ನು ಕಾಂಗ್ರೆಸ್ ಭವನದ ಕಟ್ಟಡ ನಿರ್ಮಾಣ ಮಾಡಲು ರಿಯಾಯಿತಿ ದರದಲ್ಲಿ ಮಂಜೂರು ಮಾಡಲು.

d. ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ಪುರಸಭೆ ವ್ಯಾಪ್ತಿಯ ಗುತ್ತಿಗೇರಿ ಗ್ರಾಮದ ಬಿನ್‌ಶೇತ್ಕಿ ಬಡಾವಣೆಯಲ್ಲಿನ ನಾಗರಿಕ ಸೌಲಭ್ಯಕ್ಕಾಗಿ ಮೀಸಲಿಟ್ಟಿರುವ ಪುರಸಭೆ ಮಾಲೀಕತ್ವದ ಸಿಟಿಎಸ್ ನಂ. 3471 ಫ/39ರಲ್ಲಿ ಒಟ್ಟು 420.00 ಚ.ಮೀ. ವಿಸ್ತೀರ್ಣವುಳ್ಳ ನಾಗರಿಕ ಸೌಲಭ್ಯ ನಿವೇಶನವನ್ನು ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ 29 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಲು.

e. ರಾಯಚೂರು ಜಿಲ್ಲೆ, ಮಾನವಿ ತಾಲ್ಲೂಕಿನ ಮಾನವಿ ಗ್ರಾಮದ ಸ.ನಂ. 422/2/ಅ-1 ರಲ್ಲಿ ಕ್ಷೇತ್ರ: 2ಎ-15ಗುಂಟೆ ವಿಸ್ತೀರ್ಣದ ಬಹುನಿವೇಶನ ವಿನ್ಯಾಸದಲ್ಲಿ ಕಾಯ್ದಿರಿಸಿದ 303.00 ಚ.ಮೀ. ವಿಸ್ತೀರ್ಣವುಳ್ಳ ನಾಗರಿಕ ಸೌಲಭ್ಯ ನಿವೇಶನವನ್ನು ಕಾಂಗ್ರೆಸ್ ಭವನ ಟ್ರಸ್ಟ್ (ರಿ), ಬೆಂಗಳೂರು ಇವರಿಗೆ ಹಂಚಿಕೆ ಮಾಡಲು.

f. ಯಾದಗಿರಿ ಜಿಲ್ಲೆ, ಶಹಾಪೂರ ತಾಲ್ಲೂಕಿನ ಹಳಿಸಗರ ಗ್ರಾಮದ ಸ.ನಂ. 527/*/4, ಸ.ನಂ. 529/*/2, ಸ.ನಂ. 527/*/1 ಮತ್ತು ಸ.ನಂ. 527/*/5 ರ ಬಹು ನಿವೇಶನ ವಿನ್ಯಾಸದಲ್ಲಿನ ಒಟ್ಟು 2175.26 ಚ.ಮೀ. ವಿಸ್ತೀರ್ಣವುಳ್ಳ ನಾಗರಿಕ ಸೌಲಭ್ಯ ನಿವೇಶನವನ್ನು ಕಾಂಗ್ರೆಸ್ ಭವನ ಟ್ರಸ್ಟ್ (ರಿ), ಬೆಂಗಳೂರು ಇವರಿಗೆ ಹಂಚಿಕೆ ಮಾಡಲು.

g. ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು, ಕಸಬಾ ಹೋಬಳಿ, ಹಿರೇಬಿದನೂರು ಗ್ರಾಮದ ಸ.ನಂ.62/1 ರಲ್ಲಿ 02ಎಕರೆ-04ಗುಂಟೆ ಸ.ನಂ62/2 ರಲ್ಲಿ 01ಎಕರೆ-10ಗುಂಟೆ ಸ.ನಂ.62/3 ರಲ್ಲಿ 01ಎಕರೆ-28ಗುಂಟೆ ಸ.ನಂ 63/1 ರಲ್ಲಿ 00ಎಕರೆ39ಗುಂಟೆ (01ಗುಂಟೆ 'ಎ' ಖರಾಬು ಸೇರಿದೆ) ಸ.ನಂ 63/2 ರಲ್ಲಿ 02ಎಕರೆ 04ಗುಂಟೆ (01ಗುಂಟೆ 'ಎ' ಖರಾಬು ಸೇರಿದೆ) ಮತ್ತು ಸ.ನಂ.63/3 ರಲ್ಲಿ 01ಎಕರೆ-22ಗುಂಟೆ (02ಗುಂಟೆ 'ಎ' ಖರಾಬು ಸೇರಿದೆ) ಒಟ್ಟು 08ಎ-39ಗು ವಿಸ್ತೀರ್ಣದ ವಿನ್ಯಾಸದಲ್ಲಿ ಕಾಯ್ದಿರಿಸಿರುವ 1816.38ಚ.ಮೀ ವಿಸ್ತೀರ್ಣದ ನಿವೇಶನವನ್ನು ಕಾಂಗ್ರೆಸ್ ಭವನ ಟ್ರಸ್ಟ್ (ರಿ), ಬೆಂಗಳೂರು ಇವರಿಗೆ ಹಂಚಿಕೆ ಮಾಡಲು.

ಮೇಲೆ ಓದಲಾದ ಉಲ್ಲೇಖ (2) ರ ಪತ್ರಗಳಲ್ಲಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಪ್ರಶ್ನಿತ ಜಾಗವನ್ನು ಅಥವಾ ನಿವೇಶನಗಳನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 129 ಟಿಎಂಡಿ

2002, ದಿನಾಂಕ: 02.06.2003ರ ಮಾರ್ಗಸೂಚಿಯಂತೆ ಹಾಗೂ ಅಧಿಸೂಚನೆ ಸಂಖ್ಯೆ: ನಅಇ 27 ಟಿಟಿಪಿ 2017, ದಿನಾಂಕ: 24.05.2017ರಲ್ಲಿನ ಮಾರ್ಗಸೂಚಿಗಳಂತೆ ಬ್ಲಾಕ್ ಕಾಂಗ್ರೆಸ್ ಸಮಿತಿ ಕಟ್ಟಡ ನಿರ್ಮಾಣಕ್ಕೆ ಮಂಜೂರು ಮಾಡಲು ಅವಕಾಶವಿರುವುದಿಲ್ಲ. ಮುಂದುವರೆದು, ನಾಗರಿಕ ಸೌಲಭ್ಯಕ್ಕೆ ಮೀಸಲಿರಿಸಲಾದ ನಿವೇಶನಗಳನ್ನು Karnataka Planning Authorities (Allotment of Civic amenity sites) Rules, 2016ರನ್ವಯ ಗುತ್ತಿಗೆ ಮೂಲಕ ಹಂಚಿಕೆ ಮಾಡಲು ಅವಕಾಶವಿರುತ್ತದೆ. ನಾಗರಿಕ ಸೌಲಭ್ಯಕ್ಕೆ ಮೀಸಲಿರಿಸಲಾದ ನಿವೇಶನಗಳ ಮಂಜೂರಾತಿಗೆ ಅವಕಾಶವಿರುವುದಿಲ್ಲ ಎಂದು ರವರು ತಿಳಿಸಿರುತ್ತಾರೆ.

ಮೇಲೆ ಓದಲಾದ ಉಲ್ಲೇಖ (3)ರಲ್ಲಿ ಕರ್ನಾಟಕ ಯೋಜನಾ ಪ್ರಾಧಿಕಾರಗಳ (ನಾಗರಿಕ ಸೌಕರ್ಯ ನಿವೇಶನಗಳ ಹಂಚಿಕೆ) ನಿಯಮಗಳು 2016 ರಲ್ಲಿ Institution ಪರಿಭಾಷೆ ನೀಡಲಾಗಿದ್ದು, ಅದರನ್ವಯ ನಾಗರಿಕ ಸೌಲಭ್ಯ ನಿವೇಶನವನ್ನು ಯಾವುದೇ ಸಂಸ್ಥೆಗೆ ಹಂಚಿಕೆ ಮಾಡಬೇಕಾದಲ್ಲಿ ಪ್ರಾಧಿಕಾರವು KTCP (ಸಿ.ಎ.ನಿವೇಶನ ಹಂಚಿಕೆ) ನಿಯಮಗಳ "civic amenity" ರಡಿಯಲ್ಲಿ ನಮೂದಿಸಿರುವ ಉದ್ದೇಶಗಳಿಗೆ ಮಾತ್ರ ಹಂಚಿಕೆ ಮಾಡಲು ಅವಕಾಶವಿರುತ್ತದೆ. ಆದರೆ, ರಾಜಕೀಯ ಪಕ್ಷಗಳ ಭವನಗಳಿಗೆ ನಾಗರಿಕ ಸೌಲಭ್ಯ ನಿವೇಶನವನ್ನು ಹಂಚಿಕೆ ಮಾಡಲು ಸದರಿ ನಿಯಮಗಳಲ್ಲಿ ಹಾಗೂ ದಿನಾಂಕ: 24-05-2017 ರ ಅಧಿಸೂಚನೆ ಸಂಖ್ಯೆ: ನಅಇ 27 ಟಿಟಿಪಿ 2016 ರನ್ವಯ ಅವಕಾಶವಿರುವುದಿಲ್ಲ ಎಂದು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ ರವರು ತಿಳಿಸಿರುತ್ತಾರೆ.

ಸಚಿವ ಸಂಪುಟವು ವಿಷಯ ಸಂಖ್ಯೆ: ಸಿ 1023/2025, ದಿನಾಂಕ:04.12.2025 ರಲ್ಲಿ ಸದರಿ 7 ನಾಗರಿಕ ಸೌಲಭ್ಯ ನಿವೇಶನಗಳನ್ನು, ಅವುಗಳ ಮೌಲ್ಯದ ಶೇಕಡಾ 5ರಷ್ಟು ದರವನ್ನು ವಿಧಿಸಿ, ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಖಾಯಂ ಆಗಿ ಮಂಜೂರು ಮಾಡಲು ತೀರ್ಮಾನಿಸಿರುತ್ತದೆ.

ಆದರಂತೆ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 24 ಟಿಎಂಡಿ 2025 (ಇ).**
**ಬೆಂಗಳೂರು, ದಿನಾಂಕ: 15.12.2025**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಈ ಕೆಳಕಂಡ ಏಳು ನಾಗರಿಕ ಸೌಲಭ್ಯ ನಿವೇಶನಗಳನ್ನು ಅವುಗಳ ಮೌಲ್ಯದ ಶೇಕಡಾ 5ರಷ್ಟು ದರವನ್ನು ವಿಧಿಸಿ, ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಕಛೇರಿ ಕಟ್ಟಡದ ನಿರ್ಮಾಣದ ಉದ್ದೇಶಕ್ಕಾಗಿ ಖಾಯಂ ಆಗಿ ಮಂಜೂರು ಮಾಡಿ ಆದೇಶಿಸಿದೆ.

a. ಶಿಕಾರಿಪುರ ಪುರಸಭೆ ವ್ಯಾಪ್ತಿಯ 15ನೇ ವಾರ್ಡಿನ ಹಳಿಯೂರು ಹೊಸಕೇರಿ ರಾಘವೇಂದ್ರ ಸ್ವಾಮಿ ಮಠದ ವ್ಯಾಪ್ತಿಯ ಶಿಕಾರಿಪುರ ಪುರಸಭೆ ಮಾಲೀಕತ್ವದ ಖಾತೆ ಸಂಖ್ಯೆ: 243/243/225 ಸ್ವತ್ತಿನ ಅಳತೆ, (90+94)/2*(225+230)/2 ಮತ್ತು (78+87)/2*(197+230)/2 ಅಡಿಯಲ್ಲಿ ಅಳತೆ 40*60 ಅಡಿ ನಿವೇಶನವನ್ನು ಬಿಟ್ಟು ಉಳಿದ ಸಂಪೂರ್ಣ ಅಳತೆಯ ಜಾಗ.

b. ಅನವಟ್ಟಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಕೆ.ಎಂ.ಎಫ್ 24 ಸರ್ವೆ ನಂ. 8/16ರ ಕೃಷಿ ಜಮೀನು ಮಾನ್ಯ ಜಿಲ್ಲಾಧಿಕಾರಿಗಳಿಂದ ಭೂ ಪರಿವರ್ತನೆಗೊಂಡಿದ್ದು, ಸದರಿ ಜಾಗದಲ್ಲಿ ಮೀಸಲಿಟ್ಟಿರುವ ಸಾರ್ವಜನಿಕ ಜಾಗದ ಖಾತೆಯು ಹಾಲಿ ಪಟ್ಟಣ ಪಂಚಾಯಿತಿಯಲ್ಲಿ ದಾಖಲಿದ್ದು, ಸದರಿ ಜಾಗದಲ್ಲಿ 30.01+13.00=390.13 ಚದರ ಮೀಟರ್ ವಿಸ್ತೀರ್ಣದ ನಿವೇಶನ.

c. ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ಪುರಸಭೆ ವ್ಯಾಪ್ತಿಯಲ್ಲಿನ ಹೊಳಲ್ಕೆರೆ ಪುರಸಭೆ ಠಾಣೆಯ ಹಿಂಭಾಗದಲ್ಲಿರುವ ಖಾತಾ ಸಂಖ್ಯೆ: 213 ವಿಸ್ತೀರ್ಣ 80*90 ಅಡಿ ಅಳತೆಯ ಜಾಗ.

d. ಉತ್ತರಕನ್ನಡ ಜಿಲ್ಲೆಯ ಹಳಿಯಾಳ ಪುರಸಭೆ ವ್ಯಾಪ್ತಿಯ ಗುತ್ತಿಗೇರಿ ಗ್ರಾಮದ ಬಿನ್ ಶೇತ್ತಿ ಬಡಾವಣೆಯಲ್ಲಿನ ನಾಗರಿಕ ಸೌಲಭ್ಯಕ್ಕಾಗಿ ಮೀಸಲಿಟ್ಟಿರುವ ಪುರಸಭೆ ಮಾಲೀಕತ್ವದ ಸಿಟಿಎಸ್ ನಂ. 3471 ಫ/39ರಲ್ಲಿ ಒಟ್ಟು 420.00 ಚ.ಮೀ. ವಿಸ್ತೀರ್ಣವುಳ್ಳ ನಾಗರಿಕ ಸೌಲಭ್ಯ ನಿವೇಶನ.

e. ರಾಯಚೂರು ಜಿಲ್ಲೆ, ಮಾನವಿ ತಾಲ್ಲೂಕಿನ ಮಾನವಿ ಗ್ರಾಮದ ಸ.ನಂ. 422/2/ಅ-1 ರಲ್ಲಿ ಕ್ಷೇತ್ರ: 2ಎ-15ಗುಂಟೆ ವಿಸ್ತೀರ್ಣದ ಬಹುನಿವೇಶನ ವಿನ್ಯಾಸದಲ್ಲಿ ಕಾಯ್ದಿರಿಸಿದ 303.00 ಚ.ಮೀ. ವಿಸ್ತೀರ್ಣವುಳ್ಳ ನಾಗರಿಕ ಸೌಲಭ್ಯ ನಿವೇಶನ.

f. ಯಾದಗಿರಿ ಜಿಲ್ಲೆ, ಶಹಾಪೂರ ತಾಲ್ಲೂಕಿನ ಹಳಿಸಗರ ಗ್ರಾಮದ ಸ.ನಂ. 527/*/4, ಸ.ನಂ. 529/*/2, ಸ.ನಂ. 527/*/1 ಮತ್ತು ಸ.ನಂ. 527/*/5 ರ ಬಹು ನಿವೇಶನ ವಿನ್ಯಾಸದಲ್ಲಿನ ಒಟ್ಟು 2175.26 ಚ.ಮೀ. ವಿಸ್ತೀರ್ಣವುಳ್ಳ ನಾಗರಿಕ ಸೌಲಭ್ಯ ನಿವೇಶನ.

g. ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು, ಕಸಬಾ ಹೋಬಳಿ, ಹಿರೇಬಿದನೂರು ಗ್ರಾಮದ ಸ.ನಂ.62/1 ರಲ್ಲಿ 02ಎಕರೆ-04ಗುಂಟೆ ಸ.ನಂ62/2 ರಲ್ಲಿ 01ಎಕರೆ-10ಗುಂಟೆ ಸ.ನಂ.62/3 ರಲ್ಲಿ 01ಎಕರೆ-28ಗುಂಟೆ ಸ.ನಂ 63/1 ರಲ್ಲಿ 00ಎಕರೆ39ಗುಂಟೆ (01ಗುಂಟೆ 'ಎ' ಖರಾಬು ಸೇರಿದೆ) ಸ.ನಂ 63/2 ರಲ್ಲಿ 02ಎಕರೆ 04ಗುಂಟೆ (01ಗುಂಟೆ 'ಎ' ಖರಾಬು ಸೇರಿದೆ) ಮತ್ತು ಸ.ನಂ.63/3 ರಲ್ಲಿ 01ಎಕರೆ-22 ಗುಂಟೆ (02ಗುಂಟೆ 'ಎ' ಖರಾಬು ಸೇರಿದೆ) ಒಟ್ಟು 08ಎ-39ಗು ವಿಸ್ತೀರ್ಣದ ವಿನ್ಯಾಸದಲ್ಲಿ ಕಾಯ್ದಿರಿಸಿರುವ 1816.38 ಚ.ಮೀ ವಿಸ್ತೀರ್ಣದ ನಿವೇಶನ.

**ಷರತ್ತುಗಳು:**

1. ಸದರಿ ಜಾಗಗಳನ್ನು ಕಾಂಗ್ರೆಸ್ ಕಛೇರಿ ಕಟ್ಟಡದ ನಿರ್ಮಾಣದ ಉದ್ದೇಶಕ್ಕೆ ಹಂಚಿಕೆ ಮಾಡಿದ್ದು, ಅದನ್ನು ಹೊರತುಪಡಿಸಿ, ಬೇರೆ ಯಾವುದೇ ಉದ್ದೇಶಗಳಿಗೆ ಬಳಸತಕ್ಕದ್ದಲ್ಲ.
2. ಈ ಜಾಗಗಳನ್ನು ಯಾವುದೇ ಸಂದರ್ಭದಲ್ಲಿ ಬೇರೆ ಯಾರಿಗೂ ಮಾರಾಟ ಮಾಡುವಂತಿಲ್ಲ ಅಥವಾ ಗುತ್ತಿಗೆಗೆ ನೀಡುವಂತಿಲ್ಲ.
3. ಈ ಜಾಗಗಳನ್ನು ಪಡೆದ ಸಂಸ್ಥೆಯು ಮೇಲಿನ ಷರತ್ತುಗಳನ್ನು ಪಾಲಿಸಲು ವಿಫಲವಾದಲ್ಲಿ ಯಾವುದೇ ಪರಿಹಾರ ನೀಡದೇ ಸದರಿ ಜಾಗಗಳಲ್ಲಿರುವ ಕಟ್ಟಡಗಳ

ಸಹಿತ ವಶಕ್ಕೆ ಪಡೆಯಲು ಆಯಾಯ ನಗರ ಯೋಜನಾ ಪ್ರಾಧಿಕಾರಗಳು / ನಗರ ಸ್ಥಳೀಯ ಸಂಸ್ಥೆಗಳು ಸಂಪೂರ್ಣ ಹಕ್ಕು ಹೊಂದಿರುತ್ತದೆ.

4. ನಗರ ಯೋಜನಾ ಪ್ರಾಧಿಕಾರಗಳು / ನಗರ ಸ್ಥಳೀಯ ಸಂಸ್ಥೆಗಳ ವತಿಯಿಂದ ಕಛೇರಿ ಕಟ್ಟಡದ ನಿರ್ಮಿಸಲು ಯಾವುದೇ ಅನುದಾನ ನೀಡತಕ್ಕದ್ದಲ್ಲ.

ಈ ಆದೇಶವನ್ನು ಸಚಿವ ಸಂಪುಟವು ಪ್ರಕರಣ ಸಂಖ್ಯೆ: ಸಿ:1023/2025, ದಿನಾಂಕ:04.12.2025 ರಂದು ನೀಡಿರುವ ತೀರ್ಮಾನದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

15/12/2025

**(ಮಹಾಂತಪ್ಪ ಎಸ್. ತುರಕನೂರ)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.
(ಪೌರಾಡಳಿತ-2 ಮತ್ತು ಮಂಡಳಿ)

15/12

**ಇವರಿಗೆ:**

1. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ, ಬೆಂಗಳೂರು.
2. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ವಿವಿಗೋಪುರ, ಬೆಂಗಳೂರು.
3. ಜಿಲ್ಲಾಧಿಕಾರಿ, ಶಿವಮೊಗ್ಗ, ಚಿತ್ರದುರ್ಗ, ಉತ್ತರಕನ್ನಡ, ರಾಯಚೂರು, ಯಾದಗಿರಿ, ಚಿಕ್ಕಬಳ್ಳಾಪುರ ಜಿಲ್ಲೆಗಳು.
4. ಮುಖ್ಯಾಧಿಕಾರಿಗಳು, ಪುರಸಭೆ/ ಪಟ್ಟಣ ಪಂಚಾಯಿತಿ, ಶಿಕಾರಿಪುರ, ಆನವಟ್ಟಿ, ಶಿವಮೊಗ್ಗ ಜಿಲ್ಲೆ.
5. ಮುಖ್ಯಾಧಿಕಾರಿಗಳು, ಪುರಸಭೆ ಹಳಿಯಾಳ, ಉತ್ತರ ಕನ್ನಡ ಜಿಲ್ಲೆ.
6. ಮುಖ್ಯಾಧಿಕಾರಿಗಳು, ಪುರಸಭೆ, ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆ.
7. ಸದಸ್ಯ ಕಾರ್ಯದರ್ಶಿ, ನಗರ ಯೋಜನಾ ಪ್ರಾಧಿಕಾರ, ಮಾನವಿ, ರಾಯಚೂರು ಜಿಲ್ಲೆ.
8. ಸದಸ್ಯ ಕಾರ್ಯದರ್ಶಿ, ನಗರ ಯೋಜನಾ ಪ್ರಾಧಿಕಾರ, ಶಹಾಪೂರ, ಯಾದಗಿರಿ ಜಿಲ್ಲೆ.
9. ಸದಸ್ಯ ಕಾರ್ಯದರ್ಶಿ, ನಗರ ಯೋಜನಾ ಪ್ರಾಧಿಕಾರ, ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ
10. ಕಾಂಗ್ರೆಸ್ ಭವನ ಟ್ರಸ್ಟ (ರಿ.), ಇಂದಿರಾ ಗಾಂಧಿ ಭವನ್ ನಂ.12, ಜಸ್ಮ ಭವನ್ ರೋಡ್ ಬೆಂಗಳೂರು-560052
11. ಸರ್ಕಾರದ ಅಪರ ಕಾರ್ಯದರ್ಶಿ, ಸಚಿವ ಸಂಪುಟ (ಪ್ರಕರಣ ಸಂಖ್ಯೆ: ಸಿ: 1023/2025, ದಿನಾಂಕ:04.12.2025), ವಿಧಾನಸೌಧ, ಬೆಂಗಳೂರು.

**ಪ್ರತಿ:**

1. ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
4. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಅನುಬಂಧ-2

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ತುಮಕೂರು ಮಹಾನಗರ ಪಾಲಿಕೆಯ ಮಾಲೀಕತ್ವದ ತುಮಕೂರು ಜಿಲ್ಲೆ, ತುಮಕೂರು ತಾಲ್ಲೂಕು, ಕಸಬಾ ದಕ್ಷಿಣ ಹೋಬಳಿ, ಮರಳೂರು ಗ್ರಾಮದ ಸ.ನಂ.87/2 ರಲ್ಲಿನ 2.00 ಎಕರೆ ಜಾಗವನ್ನು ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಮಂಜೂರು ಮಾಡುವ ಬಗ್ಗೆ.

**ಓದಲಾಗಿದೆ:**
1. ಡಾ|| ಜಿ.ಪರಮೇಶ್ವರ, ಮಾನ್ಯ ಗೃಹ ಸಚಿವರು ಇವರ ನಡವಳಿಯ ಸಂಖ್ಯೆ: ಗೃಸಕಸಂ:360/2024-25, ದಿನಾಂಕ: 01.07.2024.
2. ಆಯುಕ್ತರು, ತುಮಕೂರು ಮಹಾನಗರ ಪಾಲಿಕೆ ಇವರ ಪತ್ರ ಸಂಖ್ಯೆ:ತುಮಪಾ/ಕಂ.ಶಾ/ಸಿಆರ್-95/2023-24, ದಿನಾಂಕ: 09.09.2024, 18.10.20224 ಮತ್ತು 03.04.2025
3. ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ ಇವರ ಪತ್ರ ಸಂಖ್ಯೆ:ಡಿಯುಡಿಸಿ/ತುಮಪಾ/ಸಿಆರ್/27/2024-25, ದಿನಾಂಕ: 16.04.2025.

******

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ನಡವಳಿಯಲ್ಲಿ ತುಮಕೂರು ಜಿಲ್ಲೆ, ತುಮಕೂರು ತಾಲ್ಲೂಕು, ಕಸಬಾ ದಕ್ಷಿಣ ಹೋಬಳಿ, ಮರಳೂರು ಗ್ರಾಮದ ಸ.ನಂ.87/2ರಲ್ಲಿ ವಿಸ್ತೀರ್ಣ 02.00 ಎಕರೆ ಜಮೀನು ಬೀಳು, ಖುಲ್ಲಾ ಪ್ರದೇಶವಾಗಿದ್ದು, ತುಮಕೂರು ಮಹಾನಗರ ಪಾಲಿಕೆಯ ವ್ಯಾಪ್ತಿ ಹಾಗೂ ಸುಪರ್ದಿಯಲ್ಲಿರುತ್ತದೆ. ಸದರಿ ಜಮೀನಿನ ಸುತ್ತ ವಸತಿ ಪ್ರದೇಶವು ನಿರ್ಮಾಣಗೊಂಡು ಮನೆಗಳು ಮತ್ತು ಪಕ್ಕದಲ್ಲಿ ಶೈಕ್ಷಣಿಕ ಸಂಸ್ಥೆಗಳಿಂದ ಸುತ್ತುವರೆದಿದ್ದು, ಸದ್ಯ ಈ ಜಾಗವು ಖಾಲಿ ಇರುತ್ತದೆ ಎಂದು ತಿಳಿಸಿ, ಸದರಿ ಸ.ನಂ:87/2ರಲ್ಲಿ ಖಾಲಿ ಇರುವ 02.00 ಎಕರೆ ಜಾಗವನ್ನು ರಾಜೀವ್ ಗಾಂಧಿ ಅರ್ಬನ್ ಡೆವಲಪ್‌ಮೆಂಟ್ ಸಂಸ್ಥೆ, ತುಮಕೂರುವರಿಗೆ ಕಾನೂನಿನ್ವಯ ಮಂಜೂರು ಮಾಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ಆಯುಕ್ತರು, ತುಮಕೂರು ಮಹಾನಗರ ಪಾಲಿಕೆ ಇವರು ದಿನಾಂಕ: 09.09.2024ರ ಪತ್ರದಲ್ಲಿ ತುಮಕೂರು ತಾಲ್ಲೂಕು, ಕಸಬಾ ದಕ್ಷಿಣ ಹೋಬಳಿ, ಮರಳೂರು ಗ್ರಾಮದ ಸ.ನಂ.87/2 ರಲ್ಲಿ ವಿಸ್ತೀರ್ಣ 2-00 ಎಕರೆ ಜಮೀನನ್ನು ರಾಜೀವ್‌ಗಾಂಧಿ ಅರ್ಬನ್ ಅಂಡ್ ರೂರಲ್ ಡೆವಲಪ್‌ಮೆಂಟ್ ಸಂಸ್ಥೆಗೆ ಮಂಜೂರು ಮಾಡುವ ಕುರಿತು ಈ ಕೆಳಕಂಡಂತೆ ವರದಿಯನ್ನು ಸಲ್ಲಿಸಿರುತ್ತಾರೆ.

- ಸದರಿ ಸ.ನಂ.87/1 ಮತ್ತು 87/2 ಒಟ್ಟು 4.00 ಎಕರೆ ಜಮೀನು 1943 ರಲ್ಲಿ "For dumping street sweeping night soil, etc" ಉದ್ದೇಶಕ್ಕೆ ತುಮಕೂರು ಮುನಿಸಿಪಾಲಿಟಿಗೆ ಭೂಸ್ವಾಧೀನವಾಗಿರುತ್ತದೆ.
- ಪ್ರಸ್ತುತ ಸ.ನಂ.87/2 ವಿಸ್ತೀರ್ಣ 2-00 ಎಕರೆ ಜಮೀನು ಮಾಲೀಕತ್ವದ ಬಗ್ಗೆ, ಶ್ರೀಮತಿ ಗಂಗಮ್ಮ ಕೋಂ ಲೇಟ್ ಕೋದಂಡರಾಮಯ್ಯ ಮತ್ತು ಇತರರು ಇವರು

ಪಾಲಿಕೆ ವಿರುದ್ಧ ತುಮಕೂರು 3ನೇ ಅಧಿಕ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್.ನಂ. 426/2015 ರಂತೆ ಹಾಗೂ ಎಂ.ಎ ಪ್ರಕರಣ ಸಂಖ್ಯೆ:19/2023 ಮಾನ್ಯ ಜಿಲ್ಲಾ ನ್ಯಾಯಾಲಯ ತುಮಕೂರು ಇಲ್ಲಿ ಎರಡೂ ಪ್ರಕರಣಗಳು ವಿಚಾರಣೆ ಹಂತದಲ್ಲಿರುತ್ತದೆ.

- ದಿನಾಂಕ 02.07.1942ರ ಸರ್ಕಾರದ ಗೆಜೆಟ್ ನಂತೆ ಸದರಿ ಜಮೀನು ತುಮಕೂರು ಪಾಲಿಕೆಯ ಮುನಿಸಿಪಾಲಿಟಿಗೆ ಭೂ ಸ್ವಾಧೀನವಾಗಿರುತ್ತದೆ ಹಾಗೂ ತುಮಕೂರು ಪಹಣಿಯು ತುಮಕೂರು ಮಹಾನಗರ ಪಾಲಿಕೆಯ ಹೆಸರಿನಲ್ಲಿರುತ್ತದೆ. ಪ್ರಸ್ತುತ ಜಮೀನಿನ ಉಪನೋಂದಣಾಧಿಕಾರಿಗಳ 2023-24ನೇ ಸಾಲಿನ ಮಾರ್ಗಸೂಚಿ ಮೌಲ್ಯ ಎಕರೆ ಒಂದಕ್ಕೆ ರೂ 1,70,00,000/- (ಒಂದು ಕೋಟಿ ಎಪ್ಪತ್ತು ಲಕ್ಷಗಳು) ಗಳು ಆಗಿರುವುದಾಗಿ ತಿಳಿಸಿರುತಾರೆ.
- ಮೇಲ್ಕಂಡ ಸಂಸ್ಥೆಗೆ ಸ.ನಂ.87/2ರಲ್ಲಿ 2-00 ಎಕರೆ ಜಮೀನನ್ನು ಕರ್ನಾಟಕ ಪೌರನಿಗಮ ಅಧಿನಿಯಮ 1976 ಕಲಂ 176 ರಂತೆ ಮಂಜೂರು ಮಾಡುವ ಬಗ್ಗೆ ವರದಿಯನ್ನು ಸಲ್ಲಿಸಿರುತ್ತಾರೆ.

ಆಯುಕ್ತರು, ತುಮಕೂರು ಮಹಾನಗರ ಪಾಲಿಕೆ ರವರ ಮೇಲ್ಕಂಡ ವರದಿಯನ್ವಯ ತುಮಕೂರು ತಾಲ್ಲೂಕು, ಕಸಬಾ ದಕ್ಷಿಣ ಹೋಬಳಿ, ಮರಳೂರು ಗ್ರಾಮದ ಸರ್ವೆ ನಂ.87/2 ರಲ್ಲಿನ 2 ಎಕರೆ ಜಮೀನನ್ನು ರಾಜೀವ್ ಗಾಂಧಿ ಅರ್ಬನ್ ಅಂಡ್ ರೂರಲ್ ಡೆವಲಪ್‌ಮೆಂಟ್ ಸಂಸ್ಥೆ ತುಮಕೂರು ಇವರಿಗೆ ಮಂಜೂರು ಮಾಡುವ ಬಗ್ಗೆ ನಿಯಮಾವಳಿಗಳಲ್ಲಿ ಅವಕಾಶವಿರುವ ಬಗ್ಗೆ ಪರಿಶೀಲಿಸಿ, ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ ಹಾಗೂ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರುಗಳನ್ನು ಕೋರಲಾಗಿತ್ತು.

ಅದರಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ ಇವರು ತುಮಕೂರು ತಾಲ್ಲೂಕು, ಕಸಬಾ ದಕ್ಷಿಣ ಹೋಬಳಿ ಮರಳೂರು ಗ್ರಾಮದ ಸರ್ವೆ ನಂ:87/2ರಲ್ಲಿ 02.00 ಎಕರೆ ಪೈಕಿ 01-00 ಎಕರೆ ಜಾಗವನ್ನು ರಾಜೀವ್ ಗಾಂಧಿ ಅರ್ಬನ್ ಅಂಡ್ ರೂರಲ್ ಡೆವಲಪ್‌ಮೆಂಟ್ ಸಂಸ್ಥೆಗೆ ಮಂಜೂರು ಮಾಡುವ ಬಗ್ಗೆ ಈ ಕೆಳಕಂಡಂತೆ ಅಭಿಪ್ರಾಯವನ್ನು ಸಲ್ಲಿಸಿರುತ್ತಾರೆ.

"ಸದರಿ ಜಮೀನಿಗೆ ಸಂಬಂಧಿಸಿದಂತೆ ಘನ ನ್ಯಾಯಾಲಯದಲ್ಲಿ ಪ್ರಕರಣವು ವಿಚಾರಣಾ ಹಂತದಲ್ಲಿ ಇರುವ ಬಗ್ಗೆ ವರದಿಯು ಈ ಕೆಳಕಂಡಂತಿದೆ.

**ಅ) ಘನ ಜಿಲ್ಲಾ ನ್ಯಾಯಾಲಯದ ಪ್ರಕರಣ ಸಂಖ್ಯೆ: ಓ.ಎಸ್ 426/2015**

ತುಮಕೂರು ತಾಲ್ಲೂಕು ಕಸಬಾ ದಕ್ಷಿಣ ಹೋಬಳಿ ಮರಳೂರು ಗ್ರಾಮದ ಸರ್ವೆ ನಂ:87/2ರ ವಿಸ್ತೀರ್ಣ 2.00 ಎಕರೆಗೆ ಸಂಬಂಧಿಸಿದಂತೆ ಶ್ರೀ ಕೋದಂಡರಾಮಯ್ಯ ಬಿನ್ ಹನುಮಂತಯ್ಯ ಇವರು ಗೌರವಾನ್ವಿತ 3ನೇ ಅಡಿಷನಲ್ ಸಿವಿಲ್ ಜಡ್ಜ್ (ಸೀನಿಯರ್ ಡಿವಿಷನ್), ತುಮಕೂರು ಇವರ ನ್ಯಾಯಾಲಯ ಇಲ್ಲಿ ತಮ್ಮ ಸ್ವತ್ತೆಂದು ಡಿಕ್ಲರೇಷನ್ ಮತ್ತು ಇಂಜಂಕ್ಷನ್ ಅನ್ನು ಕೋರಿ ತುಮಕೂರು ಮಹಾನಗರ ಪಾಲಿಕೆಯ ವಿರುದ್ದ ಪ್ರಕರಣ ಸಂಖ್ಯೆ: ಓ.ಎಸ್ 426/2015 ಅನ್ನು ದಾಖಲಿಸಿರುತ್ತಾರೆ. ಸದರಿ ಪ್ರಕರಣದ ದಾವಾದಾರರು ಮೃತರಾಗಿದ್ದು, ಪ್ರಸ್ತುತ ದಾವಾದಾರರ ವಾರಸುದಾರರು ವಕಾಲತ್ತನ್ನು ದಾಖಲಿಸಿದ್ದು, ವಿಚಾರಣಾ ಹಂತದಲ್ಲಿರುತ್ತದೆ. ಮುಂದಿನ ವಿಚಾರಣೆ ದಿನಾಂಕ: 13.06.2025ಕ್ಕೆ ನಿಗಧಿಯಾಗಿರುತ್ತದೆ. ಸದರಿ ಪ್ರಕರಣಕ್ಕೆ ಈ ತಹಲ್ ವರೆಗೂ ತಡೆಯಾಜ್ಞೆ ಇರುವುದಿಲ್ಲ.

ಆ) ಘನ ಉಚ್ಚ ನ್ಯಾಯಾಲಯ ಪ್ರಕರಣ ಸಂಖ್ಯೆ: WP 34257/2024

ತುಮಕೂರು ಮಹಾನಗರಪಾಲಿಕೆಯ ತುಮಕೂರು ತಾಲ್ಲೂಕು ಕಸಬಾ ದಕ್ಷಿಣ ಹೋಬಳಿ ಮರಳೂರು ಗ್ರಾಮದ ಸರ್ವೇ ನಂ:87/1 ಮತ್ತು 87/2 ರ ಆಸ್ತಿ ಮಾಲೀಕತ್ವ ಮತ್ತು ಭೂಸ್ವಾದೀನ ಅಂತಿಮ ಗೆಜೆಟ್ ಅಧಿಸೂಚನೆ ಸಂಖ್ಯೆ:L 11813-ML, 16-41-45, dated 22nd June 1942 ರನ್ನು ಪ್ರಶ್ನಿಸಿ ದಾವೆ ಸಲ್ಲಿಸಿದ್ದು, ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 129 ಟಿಎಂಡಿ 2002, ದಿನಾಂಕ:02.06.2003ರ ಕರ್ನಾಟಕ ಸರ್ಕಾರದ ನಡವಳಿಯಂತೆ ಮಹಾನಗರಪಾಲಿಕೆಗಳಿಗೆ ಸೇರಿದ ಜಮೀನುಗಳನ್ನು ವಿಲೇವಾರಿ ಮಾಡಲು ಮಾರ್ಗಸೂಚಿಗಳನ್ನು ನೀಡಲಾಗಿದ್ದು, ಸದರಿ ಮಾರ್ಗಸೂಚಿಗಳನ್ವಯ ಕ್ರಮ ಸಂಖ್ಯೆ:05 ರಲ್ಲಿನಂತೆ ಸಾರ್ವಜನಿಕ ಹರಾಜು ಮೂಲಕ ವಿಲೇಪಡಿಸಲು ಅವಕಾಶವಿರುವುದಾಗಿ" ಅಭಿಪ್ರಾಯಿಸಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 129 ಟಿಎಂಡಿ 2002, ದಿನಾಂಕ:02.06.2003ರಲ್ಲಿನ ಮಾರ್ಗಸೂಚಿಗಳನ್ವಯ ನಗರ ಸ್ಥಳೀಯ ಸಂಸ್ಥೆಗಳ ಜಾಗವನ್ನು ಹರಾಜು ಮೂಲಕವೇ ವಿಲೇವಾರಿ ಮಾಡಬೇಕಾಗಿರುತ್ತದೆ. ಆದರೆ, ತುಮಕೂರು ಮಹಾನಗರ ಪಾಲಿಕೆಯ ಮಾಲೀಕತ್ವದ ತುಮಕೂರು ಜಿಲ್ಲೆ, ತುಮಕೂರು ತಾಲ್ಲೂಕು, ಕಸಬಾ ದಕ್ಷಿಣ ಹೋಬಳಿ ಮರಳೂರು ಗ್ರಾಮದ ಸ.ನಂ. 87/2 ರಲ್ಲಿನ 02.00 ಎಕರೆ ಜಾಗವನ್ನು ಪ್ರಸ್ತುತ ಮಾರ್ಗಸೂಚಿ ಮೌಲ್ಯದ ಶೇ.5ರಷ್ಟು ದರ ವಿಧಿಸಿ ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಮಂಜೂರು ಮಾಡಲು ಸಚಿವ ಸಂಪುಟವು ವಿಷಯ ಸಂಖ್ಯೆ: ಸಿ:396/2025, ದಿನಾಂಕ: 22.05.2025 ರಲ್ಲಿ ಅನುಮೋದಿಸಿರುತ್ತದೆ.

ಅದರಂತೆ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 78 ತುಮಪಾ 2024 (ಇ), ಬೆಂಗಳೂರು, ದಿನಾಂಕ:27.05.2025.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ತುಮಕೂರು ಮಹಾನಗರ ಪಾಲಿಕೆಯ ಮಾಲೀಕತ್ವದ ತುಮಕೂರು ಜಿಲ್ಲೆ, ತುಮಕೂರು ತಾಲ್ಲೂಕು, ಕಸಬಾ ದಕ್ಷಿಣ ಹೋಬಳಿ, ಮರಳೂರು ಗ್ರಾಮದ ಸ.ನಂ. 87/2 ರಲ್ಲಿನ 02.00 ಎಕರೆ ಜಾಗವನ್ನು ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಪ್ರಸ್ತುತ ಮಾರ್ಗಸೂಚಿ ಮೌಲ್ಯದ ಶೇ.5ರಷ್ಟು ದರ ವಿಧಿಸಿ ಈ ಕೆಳಕಂಡ ಷರತ್ತಿಗೊಳಪಟ್ಟು ಮಂಜೂರು ಮಾಡಿ ಆದೇಶಿಸಿದೆ.

**ಷರತ್ತುಗಳು:**

1. ಸದರಿ ಜಾಗವನ್ನು ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಹಂಚಿಕೆ ಮಾಡಿದ್ದು, ಇದನ್ನು ಸದರಿ ಟ್ರಸ್ಟನ ಕಾರ್ಯಚಟುವಟಿಗಳಿಗಾಗಿ ಮಾತ್ರ ಉಪಯೋಗಿಸತಕ್ಕದ್ದು.
2. ಈ ಜಾಗವನ್ನು ಯಾವುದೇ ಸಂದರ್ಭದಲ್ಲಿ ಬೇರೆ ಯಾರಿಗೂ ಮಾರಾಟ ಮಾಡುವಂತಿಲ್ಲ ಅಥವಾ ಗುತ್ತಿಗೆಗೆ ನೀಡುವಂತಿಲ್ಲ.

3. ಈ ಜಾಗವನ್ನು ಪಡೆದ ಟ್ರಸ್ಟ್ ಮೇಲಿನ ಷರತ್ತುಗಳನ್ನು ಪಾಲಿಸಲು ವಿಫಲವಾದಲ್ಲಿ ಯಾವುದೇ ಪರಿಹಾರ ನೀಡದೇ ಸದರಿ ಜಾಗದಲ್ಲಿರುವ ಕಟ್ಟಡಗಳ ಸಹಿತ ವಶಕ್ಕೆ ಪಡೆಯಲು ತುಮಕೂರು ಮಹಾನಗರ ಪಾಲಿಕೆಯು ಸಂಪೂರ್ಣ ಹಕ್ಕು ಹೊಂದಿರುತ್ತದೆ.
4. ಈ ಆದೇಶವು ಪ್ರಸ್ತಾಪಿತ ಜಮೀನಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು ಇಲ್ಲಿ ರಿಟ್ ಅರ್ಜಿ ಸಂಖ್ಯೆ:34257/2024 ಮತ್ತು ತುಮಕೂರು ಜಿಲ್ಲಾ ನ್ಯಾಯಾಲಯದಲ್ಲಿ ಓ.ಎಸ್ ಸಂಖ್ಯೆ:426/2015 ದಾಖಲಾಗಿದ್ದು, ಸದರಿ ಪ್ರಕರಣಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ಮತ್ತು ತುಮಕೂರು ಜಿಲ್ಲಾ ನ್ಯಾಯಾಲಯ ನೀಡುವ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ.

ಈ ಆದೇಶವನ್ನು ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಿ:396/2025, ದಿನಾಂಕ: 22.05.2025 ರಲ್ಲಿ ನೀಡಿರುವ ಅನುಮೋದನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ನಾಗೇಶ್ ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ
(ಮಹಾನಗರ ಪಾಲಿಕೆ-2)

**ಇವರಿಗೆ:**

1. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
2. ಜಿಲ್ಲಾಧಿಕಾರಿ, ತುಮಕೂರು ಜಿಲ್ಲೆ, ತುಮಕೂರು.
3. ಆಯುಕ್ತರು, ತುಮಕೂರು ಮಹಾನಗರ ಪಾಲಿಕೆ.
4. ಸರ್ಕಾರದ ಅಪರ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನ ಸೌಧ, ಬೆಂಗಳೂರು(**ಪ್ರಕರಣ ಸಂಖ್ಯೆ : ಸಿ : 396/2025, ದಿನಾಂಕ: 22.05.2025)**
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಮಾಹಿತಿಗಾಗಿ:**

1. ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.